# ತಪೋವಾಣಿ

ಸಂ. 10 ಸಂ. 4 | ಏಪ್ರಿಲ್ 2013 | ರೂ.25

## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**
**ಅನು: ಶ್ಯಾಮಲಾದೇವಿ**
**(ಹಿಂದಿನ ವಾರ್ತಾಪತ್ರಗಳಿಂದ ಆಯ್ದ ಭಾಗಗಳು)**

ನಾನೊಮ್ಮೆ ಬರೆದಿದ್ದೆ –

"ನಾವು ಕೈಗೊಂಡಿರುವ ಆಧ್ಯಾತ್ಮಿಕ ಕಾರ್ಯ ಹೊಸದಲ್ಲ. ಈ ದಿಕ್ಕಿನಲ್ಲಿ ಕೆಲಸ ಮಾಡುತ್ತಿರುವವರು ನಮ್ಮದೊಂದೇ ತಂಡವಲ್ಲ ಅಥವಾ ನಾವು ಮೊದಲಿಗರೂ ಅಲ್ಲ. ಗತಕಾಲದ ದ್ರಷ್ಟಾರರು ಆರಂಭಿಸಿದ ಕಾರ್ಯವನ್ನು ನಾವು ಮುಂದುವರಿಸುತ್ತಿದ್ದೇವೆ ಮತ್ತು ಅದನ್ನು ನಮ್ಮಿಂದ ಈವೊಂದು ಅಥವಾ ಯಾವೊಂದು ಜೀವಿತ ಅವಧಿಯಲ್ಲಿ ಪೂರ್ಣಗೊಳಿಸಲಾಗುವುದಿಲ್ಲ. ನಮ್ಮ ಪರಿಶ್ರಮ, ಈ ಜ್ಯೋತಿ ಬೆಳಗುತ್ತಿರುವಂತೆ ಕಾಪಾಡುವುದಕ್ಕೆ ಮತ್ತು ಅದನ್ನು ಮುಂದಿನ ಜನಾಂಗಕ್ಕೆ ಹಸ್ತಾಂತರಿಸುವುದಕ್ಕೆ. ಇದನ್ನು ಗಂಭೀರವಾಗಿ ಪರಿಗಣಿಸಿರುವ ಯಾರೇ ಆದರೂ, ಈ ಅಂಶಗಳನ್ನು ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳಬೇಕು."

"ಯಾವುದೊಂದು ಅಥವಾ ಎಲ್ಲ ತಂಡಗಳ ಕಾರ್ಯ ಒಂದೇ ಎಂದು ಪರಿಗಣಿಸಬೇಕು. ಆಗ ಯಾವುದೊಂದು ತಂಡದ ಸಾಧನೆಗಳು, ಹೋರಾಟಗಳು ಮತ್ತು ವಿಫಲತೆಗಳು ಉಳಿದೆಲ್ಲ ತಂಡಗಳಿಗೆ ಹೆಮ್ಮೆಯ ಮತ್ತು ಕಾಳಜಿಯ ವಿಷಯಗಳಾಗಿರುತ್ತವೆ."

"ಎಲ್ಲ ತಂಡಗಳೂ ಒಟ್ಟಾಗಿ ಒಂದೇ ಕಾರ್ಯಕ್ರಮದಡಿಯಲ್ಲಿ ಕೆಲಸಮಾಡಿದರೆ, ಫಲಿತಾಂಶಗಳು ಅದ್ಭುತವಾಗಿರುತ್ತವೆ."

ನನಗೆ ಇದನ್ನು ಪುನಃ ಪುನಃ ಒತ್ತಿ ಹೇಳಬೇಕೆನಿಸುತ್ತದೆ ಏಕೆಂದರೆ ಈಗ ಒಗ್ಗೂಡುವ ಕಾಲ ಬಂದಿದೆ. ನಾವು ದೇಶ, ಭಾಷೆ, ಧರ್ಮ, ವರ್ಣಭೇದ, ಮತೀಯತೆ, ಇತ್ಯಾದಿ,. ಎಲ್ಲ ಸರಹದ್ದುಗಳನ್ನು ಮುರಿದು, ಆಧ್ಯಾತ್ಮಿಕ ನೆಲೆಗಟ್ಟಿನಲ್ಲಿ ಒಂದಾಗಿ ಶಾಂತಿ–ಸಮೃದ್ಧಿಗಳ ಒಂದು ಹೊಸ ಪ್ರಪಂಚವನ್ನು ನಿರ್ಮಾಣ ಮಾಡಬೇಕು. ಪ್ರಾಮಾಣಿಕ ಧ್ಯಾನಿಗಳು ಅತ್ಯಂತ ಶಾಂತಿಯುತ, ಶಕ್ತಿಯುತ, ಪರಿಪೂರ್ಣ ವ್ಯಕ್ತಿಗಳು. ಅವರು ಉನ್ನತ ಸ್ತರಗಳಿಂದ ಹೆಚ್ಚಿನ ಆಧ್ಯಾತ್ಮಿಕ ಚೈತನ್ಯಗಳನ್ನು ಕೆಳತರಬಲ್ಲರಷ್ಟೇ ಅಲ್ಲದೆ, ಅವರು ಆಧ್ಯಾತ್ಮಿಕ ಮತ್ತು ಭೌತಿಕ ವಿಜ್ಞಾನಗಳೆರಡರಲ್ಲೂ ಹೆಚ್ಚಿನ ಜ್ಞಾನವನ್ನು ಕೆಳತರಬಲ್ಲರು. ಅವನ್ನು ನಾವು ನಮ್ಮ ಜೀವನವನ್ನು ಉತ್ತಮಗೊಳಿಸಿಕೊಂಡು ಸಂತೋಷ ಮತ್ತು ಹೆಚ್ಚು ಶಾಂತಿಯಿಂದ ಬದುಕಲು ಅಳವಡಿಸಿಕೊಳ್ಳಬಹುದು.

ಈ ಅಂಶಗಳನ್ನು ಧ್ಯಾನಿಗಳು ಅವರಾಗಿಯೇ ಕೂಲಂಕುಶವಾಗಿ ಮೊದಲು ಅರ್ಥಮಾಡಿಕೊಳ್ಳಬೇಕು ಮತ್ತು ಧ್ಯಾನವನ್ನು ಹರಡುವ ಕಾರ್ಯಕ್ಕಾಗಿ ಮತ್ತು ಸ್ವಾರ್ಥಿ ಮಾನವ ಸೃಷ್ಟಿಸಿರುವ ವಿಭಜನೆಗಳನ್ನು ತೆಗೆದುಹಾಕುವ ಅಸಾಮಾನ್ಯ ಕಾರ್ಯಕ್ಕಾಗಿ ತಮ್ಮ ಜೀವನವನ್ನು ಮೊದಲು ವ್ಯವಸ್ಥೆಗೊಳಿಸಿಕೊಳ್ಳಬೇಕು.

ಇದೊಂದು ವಿಚಿತ್ರವಾದ ನಾಡು. ಇದು ಋಷಿಗಳ ಮತ್ತು ತಪಸ್ಸಿನ ನಾಡು! ಇದು ರಾಮಕೃಷ್ಣ, ವಿವೇಕಾನಂದ, ಅರವಿಂದ, ರಮಣ, ಇನ್ನೂ ಅನೇಕ ಆಧ್ಯಾತ್ಮಿಕ ಮಾಸ್ಟರುಗಳು ಬದುಕಿದ ನಾಡು! ನಾನು ಒತ್ತಿ ಹೇಳುತ್ತಿರುವ ಅಧ್ಯಾತ್ಮ ನಿರ್ಲಕ್ಷಿತವಾಗಿದೆ. ಯೋಗಿಗಳು ಮತ್ತು ಗುರುಗಳ ಈ ನಾಡು, ಮುಂದೆ ಇರುವ ಅತ್ಯಂತ ಮುಖ್ಯ ಆಧ್ಯಾತ್ಮಿಕ ಕಾರ್ಯಕ್ಕೆ ಜಡವಾಗಿದೆ. ಇದನ್ನು ಪ್ರಮಾಣೀಕರಣಕ್ಕಾಗಿ ಪಾಶ್ಚಾತ್ಯ ದೇಶಗಳಿಗೆ ಒಯ್ಯಬೇಕು, ಆಗ ನಾವು ಅದರ ಗುಣಗಾನ ಮಾಡುತ್ತೇವೆ.

ಆದರೆ ನಾನು ಮೊದಲೇ ಬರೆದಂತೆ – ಪೂರ್ವ ಅಥವಾ ಪಶ್ಚಿಮ, ಎಲ್ಲೇ ಕೆಲಸ ಪ್ರಾರಂಭವಾದರೂ, ಅದು ನಮ್ಮದು, ಮಾನವ ಜನಾಂಗದ್ದು.

ನನ್ನ ಸುತ್ತಲ ಸಾಧಕರು ನನ್ನನ್ನು 'ಗುರೂಜಿ' ಎಂದು, ಕೆಲವುಬಾರಿ 'ಸ್ವಾಮೀಜಿ' ಎಂದು ಸಂಬೋಧಿಸುತ್ತಾರೆ. ಯಾವುದಾದರೂ ಸರಿ. ಆದರೆ ಪ್ರತಿಯೊಬ್ಬರೂ ನನ್ನನ್ನು ಒಬ್ಬ ಆಪ್ತ, ಆತ್ಮೀಯ ಮತ್ತು ಸಾಧಕರ ಆಧ್ಯಾತ್ಮಿಕ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಅವರು ಸಾಧನೆಯಲ್ಲಿ ಮುಂದುವರಿಯಲು ಸಹಾಯ ಮಾಡಲು ಸದಾ ಸಿದ್ಧವಿರುವ ಆಧ್ಯಾತ್ಮಿಕ ಮಾರ್ಗದರ್ಶಿ ಎಂದು ಪರಿಗಣಿಸಬೇಕೆಂದು ಇಚ್ಛಿಸುತ್ತೇನೆ. ■

**ಜ್ಯೋತಿಕಾರ್ಯದ ವಾರ್ತಾಪತ್ರ**



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದರು.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ–ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.

**ಮಾನಸ ಫೌಂಡೇಶನ್ (ರಿ)**
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560077. ಭಾರತ.
✆ (080) 2846 5280, 99000 75280 (ಬೆಳಗ್ಗೆ 10ರಿಂದ ಮಧ್ಯಾಹ್ನ 1)
ಇ–ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ
ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ
ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ

### ಆನೇಕಲ್‌ನಲ್ಲಿ (ರಾಜರಾಜೇಶ್ವರಿ ಬಡಾವಣೆ)

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ) ಪ್ರಕಾಶ್‌ಮಾರ್ಗ (ಮರಾಠಿ) ವಾರ್ತಾಪತ್ರದ ವಾರ್ಷಿಕ ಚಂದಾ ರೂ. 300/– ಡಿಡಿಯನ್ನು 'Manasa Light Age Foundation' ಹೆಸರಿನಲ್ಲಿ ಕಳುಹಿಸಬೇಕು. ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.

## ಬೆಂಗಳೂರಿನಲ್ಲಿ ನಮ್ಮ ಲೈಟ್ ಚಾನಲಿಂಗ್ ಕೇಂದ್ರಗಳು

- ಶ್ರೀ ಸಿದ್ಧಾಶ್ರಮ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ – ಪ್ರತಿದಿನ ಸಂಜೆ 7 ರಿಂದ 7.15 ಘಂ.
- ಆಂಜನೇಯ ದೇವಸ್ಥಾನ, ಮಹಾಲಕ್ಷ್ಮಿ ಬಡಾವಣೆ – ಸೋಮವಾರ ಸಂಜೆ 6.30 ರಿಂದ 7 ಘಂ.
- ನಂ. 62, 2ನೇ ಅಡ್ಡರಸ್ತೆ, 3ನೇ ಮುಖ್ಯರಸ್ತೆ, ಅಲ್ಫೈನ್ ಅಪಾರ್ಟ್‌ಮೆಂಟ್ ಹತ್ತಿರ, ದೇನಾ ಬ್ಯಾಂಕ್ ಕಾಲೋನಿ, ಗಂಗಾನಗರ – ಮಂಗಳವಾರ ಬೆಳಿಗ್ಗೆ 7.31 ರಿಂದ 8 ಘಂ. ಹಾಗೂ ಸಂಜೆ 7.31 ರಿಂದ 8 ಘಂ.
- ಮಾರುತಿ ಮಂದಿರ, ವಿಜಯನಗರ – ಬುಧವಾರ ಸಂಜೆ 6.30 ರಿಂದ 7 ಘಂ.
- ಮಂಚ್ ಕಿನ್ಸ್, ನಂ. 890, 38ನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, 4ನೇ 'T' ಬ್ಲಾಕ್, ಜಯನಗರ – ಗುರುವಾರ ಸಂಜೆ 6.30 ರಿಂದ 7 ಘಂ.
- ನಂ. 312, ಹಂತ–4, ಗೋಲ್ಡನ್ ಪಾರ್ಕ್ ಅಪಾರ್ಟ್‌ಮೆಂಟ್, ಕೆ.ಸಿ.ಡಿ.ಸಿ. ಮುಖ್ಯರಸ್ತೆ, ಬೊಮ್ಮನಹಳ್ಳಿ – ಶನಿವಾರ ಬೆಳಿಗ್ಗೆ 11 ರಿಂದ 12 ಘಂ.
- 'ಸುಮತಿ', ನಂ. 481, 7ನೇ ಅಡ್ಡರಸ್ತೆ, 7ನೇ ಮುಖ್ಯರಸ್ತೆ, ಜೆ.ಪಿ.ನಗರ 3ನೇ ಹಂತ – ಶುಕ್ರವಾರ ಸಂಜೆ 6.30 ರಿಂದ 7 ಘಂ.
- ವಿಮೆನ್ಸ್ ಪೀಸ್ ಲೀಗ್, ನಂ. 36, ಶಂಕರಮಠ ರಸ್ತೆ, ಬಸವನಗುಡಿ – ಶನಿವಾರ ಸಂಜೆ 6 ರಿಂದ 6.30 ಘಂ.
- ಶ್ರೀ ರಂಗ ಕಲಾಕ್ಷೇತ್ರ, 13ನೇ ಅಡ್ಡ ರಸ್ತೆ, ಇಂದಿರಾನಗರ 2ನೇ ಹಂತ – ಶನಿವಾರ ಸಂಜೆ 5.30 ರಿಂದ 6 ಘಂ.
- ಬಲಮುರಿ ಮಹಾಗಣಪತಿ, 8ನೇ ಅಡ್ಡರಸ್ತೆ, ಹೊಯ್ಸಳ ವೃತ್ತದ ಬಳಿ, ಕೆಂಗೇರಿ ಸೆಟಲೈಟ್ ಟೌನ್– ಶನಿವಾರ ಸಂಜೆ 6.30 ರಿಂದ 7 ಘಂ.
- ಶಿಕ್ಷಾ ಸಾಗರ್ ಪ್ರೈಮರಿ ಶಾಲೆ, ನಂ. 77, 5ನೇ ಮುಖ್ಯರಸ್ತೆ, ಪೋಸ್ಟಲ್ ಕಾಲೋನಿ, ಸಂಜಯನಗರ – ಶನಿವಾರ ಸಂಜೆ 6 ರಿಂದ 7 ಘಂ.
- ಗುರುದ್ವಾರ ಸಾಹಿಬ್, ಆಂಜನೇಯ ದೇವಸ್ಥಾನದ ಎದುರು, ಅಶ್ವತ್ಥನಗರ ಮುಖ್ಯ ರಸ್ತೆ, ಸಂಜಯನಗರ – ಶನಿವಾರ ಸಂಜೆ 7.30 ರಿಂದ 8.30 ಘಂ.

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 03 | ಬುಧ | ಕೃಷ್ಣ ಅಷ್ಟಮಿ |
| 08 | ಸೋಮ | ಮಾಸ ಶಿವರಾತ್ರಿ |
| 10 | ಬುಧ | ಅಮಾವಾಸ್ಯೆ |
| 11 | ಗುರು | ಚಾಂದ್ರಮಾನ ಯುಗಾದಿ |
| 14 | ಭಾನು | ಸೌರಮಾನ ಯುಗಾದಿ |
| 18 | ಗುರು | ಶುಕ್ಲ ಅಷ್ಟಮಿ |
| 19 | ಶುಕ್ರ | ಶ್ರೀರಾಮ ನವಮಿ |
| 20 | ಶನಿ | ಶುಕ್ಲ ದಶಮಿ |
| 25 | ಗುರು | ಪೂರ್ಣಿಮಾ ಚಂದ್ರಗ್ರಹಣ: ರಾತ್ರಿ 11.33 – 26 ರ ಬೆಳಿಗ್ಗೆ 3.41 |

### ಈ ತಿಂಗಳು ತಪೋನಗರದಲ್ಲಿ

ಭಾನುವಾರಗಳು: ಉಪನ್ಯಾಸಗಳು : ಬೆಳಿಗ್ಗೆ 11–12
ವಿಶೇಷ ಧ್ಯಾನ & ಲೈಟ್ ಚಾನಲಿಂಗ್: ಮಧ್ಯಾಹ್ನ 12–1

ಭಾನುವಾರದ ಉಪನ್ಯಾಸಗಳ ನೇರ ಪ್ರಸಾರವು ವೆಬ್‌ನಲ್ಲಿ ಮೆಂಬರ್‌ಗಳಿಗೆ ಲಭ್ಯವಿದೆ. ಇದರ ಮಾಹಿತಿಗಾಗಿ ಇ–ಮೇಲ್ ಮುಖಾಂತರ ಸಂಪರ್ಕಿಸಬಹುದು.

### ಆನೇಕಲ್‌ನಲ್ಲಿ ಕಾರ್ಯಕ್ರಮ 15–4–2013, ಬೆಳಿಗ್ಗೆ 11ಘಂ.

ನಮ್ಮ ಸಪ್ತರ್ಷಿ ಧ್ಯಾನ ಕೇಂದ್ರದಲ್ಲಿ ಹೊಸದಾಗಿ ನಿರ್ಮಿಸಿರುವ ಕಟ್ಟಡದಲ್ಲಿ ಗುರೂಜಿಯವರ ಪವಿತ್ರ ಚಿತಾಭಸ್ಮವನ್ನು ಸ್ಥಾಪಿಸಲಾಗುವುದು ಮತ್ತು ಈ ಕಟ್ಟಡವನ್ನು ಲೈಟ್ ಚಾನಲ್ ಮಾಡುವ ಮುಖಾಂತರ ಚೈತನ್ಯೀಕರಿಸಲಾಗುವುದು. ಇದೇ ಸಂದರ್ಭದಲ್ಲಿ ನಮ್ಮ ಧ್ಯಾನ ಕೇಂದ್ರದ ಐದನೇ ವಾರ್ಷಿಕೋತ್ಸವವನ್ನು ಆಚರಿಸಲಾಗುವುದು.

ನಾವು ಲೈಟ್ ಚಾನಲ್ಸ್ ವಾರ್ತಾಪತ್ರವನ್ನು ಪ್ರಕಟಿಸುತ್ತಿದ್ದೇವೆ. ಇದನ್ನು ನಮ್ಮ ವೆಬ್‌ಸೈಟ್ www.lightchannels.com ನಲ್ಲಿ ಓದಬಹುದು. ಇದನ್ನು ಲೈಟ್ ಚಾನಲಿಂಗ್ ನಡೆಸಿಕೊಟ್ಟ ಶಾಲೆಗಳಿಗೆ ಹಂಚಲಾಗುತ್ತಿದೆ.

ಈಗ ಗುರೂಜಿಯವರು 'Speaking Tree' ಯ ಮಾಸ್ಟರ್‌ಗಳ ಸಾಲಿಗೆ ಸೇರ್ಪಡೆಯಾಗಿದ್ದಾರೆ. ಗುರೂಜಿಯವರ ಬ್ಲಾಗ್ ಓದಲು ಮತ್ತು ಅವರ ವಿಡಿಯೋಗಳನ್ನು ನೋಡಲು www.speakingtree.in ವೆಬ್‌ಸೈಟ್‌ಗೆ ಭೇಟಿನೀಡಿ.

## ಲೈಟ್ ಚಾನಲಿಂಗ್ ಅನುಭವಗಳು

ಲೈಟ್ ಚಾನಲಿಂಗ್ ಮಾಡಲು ಆರಂಭಿಸಿದ ನಂತರ, ನನ್ನಲ್ಲಿ ಉತ್ತಮ ಬದಲಾವಣೆಗಳು ಕಾಣಲಾರಂಭಿಸಿದವು. ನನ್ನಲ್ಲಿ ಕೋಪ ಕಡಿಮೆಯಾಯಿತು ಹಾಗೂ ನಾನು ಹೆಚ್ಚು ಚಟುವಟಿಕೆಯಿಂದ ಕೂಡಿದೆ. ನನಗೆ ಈ ಹಿಂದೆ ಇಂಗ್ಲೀಷ್ ಓದಲು ಕಷ್ಟವಾಗುತ್ತಿತ್ತು ಮತ್ತು ಈಗ ಅದು ಸರಿಯಾಯಿತು. ನನ್ನ ನೆನಪಿನಶಕ್ತಿ ಮತ್ತು ಕೈಬರಹವೂ ಉತ್ತಮಗೊಂಡಿದೆ.

– ಕಾರ್ತಿಕ್ ಎಸ್, 5ನೇ ತರಗತಿ, ಸೈಂಟ್ ಜೋಸೆಫ್ಸ್ ಕ್ಸೇವಿಯರ್ ಆರ್.ಸಿ. ಪ್ರೈಮರಿ ಶಾಲೆ ಕುಲಶೇಖರನ್ ಪಟ್ಟಿನಂ, ತಮಿಳುನಾಡು

ಒಂದು ಶಾಲೆಯಲ್ಲಿ ಮಕ್ಕಳು ತುಂಬಾ ಗದ್ದಲವನ್ನು ಮಾಡುತ್ತಿದ್ದರು. ಆದರೆ ಲೈಟ್‌ಚಾನಲ್ ಸೆಷನ್‌ನ ನಂತರ, ಅಲ್ಲಿ ಉಂಟಾದ ನಿಶ್ಶಬ್ದತೆಯನ್ನು ನೋಡಿ ಅಲ್ಲಿನ ಮುಖ್ಯೋಪಾಧ್ಯಾಯರಿಗೆ ಆಶ್ಚರ್ಯವಾಯಿತು ಮತ್ತು ಅವರು ತಮ್ಮ ಶಾಲೆಯಲ್ಲಿ ಪ್ರತಿನಿತ್ಯ ಲೈಟ್ ಚಾನಲಿಂಗ್ ಮಾಡಲು ಒಪ್ಪಿದರು. ಫೆಬ್ರವರಿ 1ರ ಲೈಟ್ ಚಾನಲಿಂಗ್ ಕಾರ್ಯಕ್ರಮದಲ್ಲಿ ಭಾಗವಹಿಸುವ ಬಗ್ಗೆ ನಾನು ಅವರಿಗೆ ದೂರವಾಣಿ ಕರೆಮಾಡಿದಾಗ, ನಾನು ಅದರ ಉತ್ತರವನ್ನು ಸ್ವತಃ ಮಕ್ಕಳಿಂದಲೇ ಕೇಳಿಸಿಕೊಳ್ಳಬೇಕೆಂದು ಹೇಳಿದರು. ಆಗ ಕಿವಿ ಗಡಚಿಕ್ಕುವ 'ಹೌದು' ಕೇಳಿಬಂತು!

– ಶ್ರೀಮತಿ ನಿರ್ಮಲಾ ಬಾಲ, ಕಾರ್ಯಕರ್ತೆ

ಒಂದು ಶಾಲೆಯಲ್ಲಿ ಮುಖ್ಯೋಪಾಧ್ಯಾಯರು ನಮ್ಮೊಂದಿಗೆ ಉತ್ತಮವಾಗಿ ಪ್ರತಿಸ್ಪಂದಿಸದೆ, ಕಳೆದವರ್ಷ ಒಲ್ಲದ ಮನಸ್ಸಿನಿಂದ ಒಂದು ಬಾರಿ ಲೈಟ್ ಚಾನಲಿಂಗ್ ಮಾಡಲು ಅನುಮತಿ ನೀಡಿದ್ದರು. ನಾನು ಇದೇ ಶಾಲೆಯಲ್ಲಿ ಈ ಬಾರಿ ಫೆಬ್ರವರಿ 1ರ ಲೈಟ್ ಚಾನಲಿಂಗ್ ಕಾರ್ಯಕ್ರಮಕ್ಕೆ ಅನುಮತಿ ಪಡೆಯಬೇಕೆಂದು ಬಯಸಿದೆ. ಅಲ್ಲಿ ಮುಖ್ಯೋಪಾಧ್ಯಾಯರ ಕೊಠಡಿಯ ಹೊರಗೆ ಕಾಯುತ್ತಿರುವಾಗ, ಬೆಳಕಿನೊಂದಿಗೆ ಪ್ರಯೋಗ ನಡೆಸಬೇಕೆಂಬ ಗುರೂಜಿಯವರ ಮಾತು ನೆನಪಾಯಿತು. ನಾನು ಅವರಿಗೆ ಬೆಳಕನ್ನು ಕಳುಹಿಸಲು ಆರಂಭಿಸಿದೆ ಮತ್ತು ನಾನು ಹೇಳಬೇಕೆಂದಿರುವುದನ್ನು ಬೆಳಕಿನ ಮುಖಾಂತರ ಹೇಳಿದೆ. ಸ್ವಲ್ಪ ಸಮಯದ ನಂತರ ಅವರು ಹೊರಗೆ ಬಂದು, ನನ್ನ ಕಡೆ ನೋಡಿ ನಾನು ಯಾವ ದಿನ ಲೈಟ್ ಚಾನಲಿಂಗ್ ಸೆಷನ್ ನಡೆಸಿಕೊಡಬೇಕೆಂದಿರುವೆ ಎಂದು ಕೇಳಿದರು. ಹೆಚ್ಚುಕಡಿಮೆ ಒಂದು ವರ್ಷವಾದರೂ ಅವರಿಗೆ ನನ್ನ ನೆನಪಿದ್ದುದು ಕಂಡು ನನಗೆ ಆಶ್ಚರ್ಯವಾಯಿತು ಮತ್ತು ತಕ್ಷಣ ಅವರು ನನಗೆ ಅನುಮತಿ ನೀಡಿದರು. ಅಲ್ಲಿ ಪದಗಳ ಅವಶ್ಯಕತೆಯೇ ಇರಲಿಲ್ಲ.... ನನ್ನ ಪರವಾಗಿ ಬೆಳಕು ಮಾತನಾಡಿತ್ತು!

– ನಿತ್ಯಾ ಜೇಮ್ಸ್, ಕಾರ್ಯಕರ್ತೆ

ನಾನು ಲೈಟ್ ಚಾನಲಿಂಗ್ ಆರಂಭಿಸಿದಾಗ, ನನ್ನ ಸುತ್ತಲಿನ ಇಡೀ ಪ್ರಪಂಚ ಬೆಳಕಾದುದನ್ನು ಕಂಡೆ. ಸುತ್ತಮುತ್ತಲೂ ಶಾಂತಿ ತುಂಬಿತ್ತು. ನನಗೆ ಬೆಳಕಿನ ಹೊರತಾಗಿ ಬೇರೇನೂ ಕಾಣಿಸಲಿಲ್ಲ. ಇದೊಂದು ಉತ್ತಮ ಅನುಭವ.

– ಜಾಫ಼ರ್, 3ನೇ ತರಗತಿ, ಸರ್ಕಾರಿ ಉರ್ದು ಶಾಲೆ, ಹೆಗ್ಡೆ ನಗರ, ಬೆಂಗಳೂರು

## ತಪೋನಗರ ಡೈರಿ

**ಸೀಮಾ ಅಲ್‌ಮೇಲ್ ಸೋಮಯಾಜಿ; ಅನು: ಪಾಂಡುರಂಗ**

ತಪೋನಗರದಲ್ಲಿ ಫೆಬ್ರವರಿ ತಿಂಗಳು ತುಂಬಾ ವಿಶೇಷವಾದುದು ಏಕೆಂದರೆ ಈ ತಿಂಗಳ ಮೊದಲ ದಿನವೇ ಮಹರ್ಷಿ ಅಮರರವರ ಜನ್ಮದಿನ ಮತ್ತು ಇದನ್ನು ವಿಶ್ವ ಸಂಚಲನ ದಿನವನ್ನಾಗಿ ಆಚರಿಸಲಾಗುತ್ತದೆ. ಗುರೂಜಿಯವರ ನಿರಂತರ ಮಾರ್ಗದರ್ಶನ ಮತ್ತು ಅವರ ಆಧ್ಯಾತ್ಮಿಕ ಉಪಸ್ಥಿತಿ ಅವರ ಭೌತಿಕ ಅನುಪಸ್ಥಿತಿಯ ಕೊರತೆಯನ್ನು ಮೀರಿಸಿತ್ತು. ಜನ್ಮದಿನೋತ್ಸವಕ್ಕೆ ಸಿದ್ಧತೆಗಳಾಗುತ್ತಿದ್ದವು. ವಿಶ್ವ ಸಂಚಲನ ದಿನದ ಕಾರ್ಯಕ್ರಮ ಚೆನ್ನಾಗಿ ನಡೆಯಿತು.

ನಿವಾಸಿಗಳ ತಿಂಗಳ ಕೂಟ ಮುಂದುವರಿಯುತ್ತಿದೆ. ಈ ಕಾರ್ಯಕ್ರಮದ ವಿನ್ಯಾಸ ಪುನರ್ ರೂಪಿತಗೊಳ್ಳುತ್ತಿದೆ. ಗುರೂಜಿಯವರು ಇನ್ನೊಂದು ಮಟ್ಟಕ್ಕೆ ಸರಿದಿರುವುದು, ಈಗ ಅವರು ಪ್ರತಿಯೊಬ್ಬ ಧ್ಯಾನಿಯ ಒಂದು ಭಾಗವಾಗಿರುವಂತೆ ಮತ್ತು ಅವರೇ ತಪೋನಗರವಾಗಿರುವಂತೆ ಆಗಿದೆ. ಕೂಟದಲ್ಲಿನ ನಿವಾಸಿಗಳೆಲ್ಲರ ಅನುಭವಗಳು ಗುರೂಜಿಯವರ ಉಪಸ್ಥಿತಿಯ ಸುತ್ತ ಕೇಂದ್ರೀಕೃತವಾಗಿತ್ತು. ಅವರ ಚತುರೋಕ್ತಿ ಮತ್ತು ಹಾಸ್ಯ ಮರೆಯಾಗಿದ್ದರೂ, ಅವರ ದೈವೀ ಉಪಸ್ಥಿತಿಯ ಅನುಭವವಾಗುತ್ತಿತ್ತು.

ಫೆಬ್ರವರಿ ತಿಂಗಳ ನಿವಾಸಿಗಳ ಕೂಟದಲ್ಲಿ, ಟೆಕ್ವೊಂಡೋ ಸ್ಪರ್ಧೆಯಲ್ಲಿ ರಾಜ್ಯಪ್ರಶಸ್ತಿ ಪಡೆದಿರುವ ನೆಡು ದುರೈರವರ ಮಗ ಅಭಿಷೇಕ್, ಅಂದು ಒಂದೇ ಹೊಡೆತದಲ್ಲಿ ಹೆಂಚನ್ನು ಒಡೆದು ತನ್ನ ನೈಪುಣ್ಯತೆಯನ್ನು ಪ್ರದರ್ಶಿಸಿದನು. ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತವನ್ನು ಕಲಿಯುತ್ತಿರುವ ದೀಪಕ್ ಗುರ್ಜರ್‌ರವರ ಮಗಳು ಉಪಾಸನಾ ಒಂದು ಭಜನೆಯನ್ನು ಹಾಡಿದಳು. ಆಕೆಯ ಮುಗ್ಧ ಕಂಠದಿಂದ ಹೊಮ್ಮಿದ ಪ್ರಾರ್ಥನೆ, ಕೂಟದ ಚೈತನ್ಯಗಳನ್ನು ಏರಿಸಿತು. ಇತರ ಮಕ್ಕಳು ಪದ್ಯಗಳು ಮತ್ತು ಹಾಸ್ಯಚಟಾಕಿಗಳಿಂದ ಎಲ್ಲರನ್ನೂ ರಂಜಿಸಿದರು. ಅದೊಂದು ಸುಂದರ ಸಂಜೆಯಾಗಿತ್ತು.

ತಪೋನಗರ ನಿವಾಸಿಯೊಬ್ಬರು ತಮ್ಮ ಹೊಸ ಮನೆಯ ಗೃಹಪ್ರವೇಶ ಮಾಡಿದರು. ತಪೋನಗರಿಗರು ಲೈಟ್ ಚಾನಲ್ ಮಾಡಲು ನೆರೆದಿದ್ದರು. ಎಲ್ಲರ ನಡುವಿನ ಆಪ್ತತೆ ಎದ್ದುಕಾಣುತ್ತಿತ್ತು. ಅನೇಕ ತಪೋನಗರಿಗರಲ್ಲಿ ತಾವೇ ಅತಿಥೇಯರೇನೋ ಎನ್ನುವಂಥ ಮತ್ತು ಅತಿಥೇಯರಲ್ಲಿ ತಾನೊಬ್ಬ ಅತಿಥಿ ಎಂಬ ಭಾವನೆಯಿತ್ತು! ■

## ಲೈಟ್ ಚಾನಲ್ಸ್
### ವಿಶ್ವ ಸಂಚಲನ

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.comಗೆ ಬನ್ನಿ.

### ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್‌ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡಬೇಕು.

## ಗುರೂಜಿ ಹೀಗೆ ಮಾತನಾಡಿದರು

(ಸಂ: ಶೋಭಾ ಕೆ. ರಾವ್; ಅನು: ಶಿವಪ್ರಕಾಶ್ ಎಲ್.)

23-03-2003

ಒಬ್ಬ ವ್ಯಕ್ತಿ ಭಾರತ ವಿಶ್ವ ಕಪ್ ಗೆಲ್ಲಬೇಕೆಂದು ಬಯಸಿ ಅಮರರವರಿಂದ ಚೈತನ್ಯಗಳನ್ನು ಪಡೆದು, ತಂಡದ ಸದಸ್ಯರಿಗೆ ರವಾನಿಸಿದನೆಂದು ನನಗೆ ತಿಳಿಸಿದರು. ಭಾರತ ಮೊಟ್ಟ ಮೊದಲ ಬಾರಿಗೆ ವಿಜಯ ಸಾಧಿಸಿತು! ಸತ್ಯವೇನೆಂದರೆ, ಆ ವ್ಯಕ್ತಿ ಅಮರರವರಿಂದ ಚೈತನ್ಯಗಳನ್ನು ಪಡೆದಿರಲಿಲ್ಲ. ಉನ್ನತ ಹಂತದಲ್ಲಿರುವ ಮಾಸ್ಟರ್‌ಗಳು ಇಂಥ ವಿಷಯಗಳಲ್ಲಿ ಯಾರ ಪಕ್ಷವನ್ನೂ ವಹಿಸುವುದಿಲ್ಲ. ಈ ವಿಷಯವನ್ನು ಆ ವ್ಯಕ್ತಿಗೆ ತಿಳಿಸದಿರುವಂತೆ ಅಮರ ನನ್ನನ್ನು ತಡೆದರು. ಪ್ರಳಯದ ಈ ದಿನಗಳಲ್ಲಿ ನಾವು ಸಮತೋಲನವನ್ನು ಕೆಡಿಸಬಾರದು, ವ್ಯಕ್ತಿಯನ್ನು ಕಂಗೆಡಿಸಬಾರದು ಎಂದು ಅವರು ಹೇಳಿದರು.

ಇನ್ನೊಬ್ಬರ ಜೀವನದಲ್ಲಿ ನಾವು ಮಧ್ಯೆ ಪ್ರವೇಶಿಸಬಾರದೆಂದು ಬಹಳ ಹಿಂದಿನಿಂದ ಋಷಿಗಳು ಹೇಳುತ್ತಾ ಬಂದಿದ್ದಾರೆ. ಅದರಿಂದ ನಮ್ಮ ಆಧ್ಯಾತ್ಮಿಕ ಪ್ರಗತಿಗೆ ಅಡಚಣೆ ಉಂಟಾಗುತ್ತದೆ. ಸಹಾಯ ಮಾಡುವುದಕ್ಕೂ ಮತ್ತು ಮಧ್ಯೆ ಪ್ರವೇಶಿಸುವುದಕ್ಕೂ ವ್ಯತ್ಯಾಸವಿದೆ.

ನಮಗೂ ಮತ್ತು ಗ್ರಹಗಳಿಗೂ ಸಂಪರ್ಕ ಉಂಟುಮಾಡುವ ಒಂದು ಮಂತ್ರವನ್ನು ಪುನರುಚ್ಚರಿಸಿದಾಗ, ಸೂಕ್ಷ್ಮ ಶರೀರ ಗ್ರಹಗಳಿಂದ ಚೈತನ್ಯಗಳನ್ನು ಪಡೆಯುತ್ತದೆ. ನಾವು ಧ್ಯಾನ ಮಾಡಿದಾಗ ಮಾತ್ರ ಸೂಕ್ಷ್ಮ ಶರೀರ ಉನ್ನತ ನೆಲೆಗಳಿಂದ ಚೈತನ್ಯಗಳನ್ನು ಪಡೆಯುತ್ತದೆ. ಚಕ್ರಗಳಿಂದ ಬಿಡುಗಡೆಗೊಂಡ ಚೈತನ್ಯಗಳನ್ನು ಅದು ಅಂತರ್ಗತ ಮಾಡಿಕೊಳ್ಳುತ್ತದೆ.

ಜನರು ತಾವು ಗಳಿಸಿರುವ ಸಾಧನೆಗೆ ಸಂತೃಪ್ತರಾಗುತ್ತಾ, ಅವರು ಪರಿವರ್ತನೆಯನ್ನು ತಡೆಯುತ್ತಾರೆ ಮತ್ತು ಸಾಧನೆಯ ಒಂದು ಹಂತದಲ್ಲಿಯೇ ಉಳಿಯುತ್ತಾರೆ. ಉನ್ನತ ನೆಲೆಗಳನ್ನು ಮುಟ್ಟಲು ಪ್ರಾಮಾಣಿಕ ಮತ್ತು ತೀವ್ರ ಪ್ರಯತ್ನಗಳು ಅತ್ಯಗತ್ಯ.

ಸತ್ಯ ಯುಗದಲ್ಲಿ ಧ್ಯಾನದ ಅಗತ್ಯವಿಲ್ಲ ಎಂದು ನನ್ನ ಗುರು ಹೇಳಿದ್ದಾರೆ. ಆದರೆ ಜನರು ಶಂಬಲದ ನಿಯಮಗಳನ್ನು ಅಭ್ಯಾಸ ಮಾಡುತ್ತಾರೆ, ಅದರಲ್ಲಿಯೂ ಪ್ರೀತಿಯನ್ನು ಹರಡುವುದು, ಏಕತೆಯನ್ನು ಅನುಭವಿಸುವುದು ಇತ್ಯಾದಿ.

ತೀವ್ರ ಪ್ರಳಯ 1987ರಲ್ಲಿ ಪ್ರಾರಂಭವಾಯಿತು ಮತ್ತು ಅದು 49 ವರ್ಷಗಳವರೆಗೆ ಮುಂದುವರಿಯುವುದು ಎಂದು ಅಮರರವರು ಹೇಳಿದ್ದಾರೆ. ಮುಂದಿನ ಅವಧಿಗಳು ಬಹಳ ಕಠಿಣವಾಗಿರುತ್ತವೆ.

ನೀವು ಧ್ಯಾನಿಸುವಾಗ ಏನನ್ನೂ ಯೋಚಿಸಬೇಡಿ ಮತ್ತು ಏನನ್ನೂ ಮಾಡಬೇಡಿ. ಬುದ್ಧಿ ನಮ್ಮನ್ನು ಒಂದು ಹಂತದವರೆಗೆ ಮಾತ್ರ ಕರೆದೊಯ್ಯುತ್ತದೆ ಎಂಬುದನ್ನು ನೆನಪಿಡಿ. ಅನುಭವ ಮಾತ್ರವೇ ನಮಗೆ ವಿವೇಕ, ನಂಬಿಕೆ ಮತ್ತು ನಿಜವಾದ ಜ್ಞಾನಗಳನ್ನು ನೇರವಾಗಿ ತರುತ್ತದೆ.

ನಮ್ಮ ಜೀವನದುದ್ದಕ್ಕೂ ನಾವು ಲೌಕಿಕ ಪ್ರಪಂಚದಲ್ಲಿ ತೊಡಗಿರಲು ಸಾಧ್ಯವಿಲ್ಲ. ಸಂತೃಪ್ತಿಯ ಗೆರೆಗಳನ್ನು ನಾವು ಹಾಕಲೇಬೇಕು. ಒಬ್ಬೊಬ್ಬರ ಸಂತೃಪ್ತಿಯ ಗೆರೆಗಳೂ ಭಿನ್ನ. ಇದರ ಅರಿವಿನಲ್ಲಿ ನಾವಿರಬೇಕು ಮತ್ತು ನಮ್ಮ ಗಮನವನ್ನು ಹೆಚ್ಚಾಗಿ ಅಧ್ಯಾತ್ಮದ ಕಡೆಗೆ ತಿರುಗಿಸಬೇಕು.

ಋಷಿಗಳು ಗತ ಮತ್ತು ಭವಿಷ್ಯವನ್ನು ತಿಳಿದವರು. ಸೂಚನೆಗಳು ವ್ಯಕ್ತಿಯಿಂದ ವ್ಯಕ್ತಿಗೆ ಬೇರೆ ಬೇರೆಯಾಗಿರುತ್ತವೆ. ನೀವು ಋಷಿಗಳ ಸೂಚನೆಯನ್ನು ಅಕ್ಷರಶಃ ಅನುಸರಿಸಿದರೆ, ನಿಮ್ಮ ಜೀವನ ಸಂಪೂರ್ಣ ಶಾಂತಿಯಿಂದ ಕೂಡಿರುತ್ತದೆ.

ನಿಮ್ಮ ಗುರುವಿನೊಂದಿಗೆ ಇರುವ ಅವಕಾಶಗಳನ್ನು ಚೆನ್ನಾಗಿ ಉಪಯೋಗಿಸಿಕೊಳ್ಳಿ. ನಿಮ್ಮ ಗುರು ದೇವರನ್ನು ಪ್ರತಿನಿಧಿಸುತ್ತಾರೆ, ಅವರು ಒಂದು ರೀತಿಯಲ್ಲಿ ಮಧ್ಯವರ್ತಿ, ಒಂದು ರೀತಿಯ ಏಜೆಂಟ್.

30-03-2003

ಗರ್ಭದಿಂದ ಮಗು ಹೊರಗೆ ಬಂದ ಮೇಲೆ ಅದು ಪ್ರಾಣಮಯ ಕೋಶವನ್ನು ಪಡೆಯುತ್ತದೆ, ನಂತರ ಭೌತಿಕ ಮತ್ತು ಸೂಕ್ಷ್ಮ ಶರೀರಗಳೊಂದಿಗೆ ಒಂದು ಸಂಪರ್ಕ ಸ್ಥಾಪನೆಯಾಗುತ್ತದೆ.

ಸಾವು ಮತ್ತು ಹುಟ್ಟಿನ ನಡುವಿನ ಅವಧಿ ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುತ್ತದೆ, ಕೆಲವು ದಿನಗಳಿಂದ ಹಿಡಿದು ಕೆಲವು ದಶಕಗಳವರೆಗೆ. ಸಾವಿನ ನಂತರ ವಿಶೇಷ ಮಾರ್ಗದರ್ಶಕರು ನಮ್ಮನ್ನು ಒಂದು ಸ್ಥಳಕ್ಕೆ ಕರೆದುಕೊಂಡು ಹೋಗಿ ನಾವು ಬಯಸಿದಷ್ಟು ಕಾಲ ವಿಶ್ರಮಿಸಲು ಅನುಮತಿಸುತ್ತಾರೆ. ಕೆಲವು ಸಲ, ಈ ಭೂಮಿಯ ಮೇಲೆ ವಾಸಿಸುತ್ತಿರುವ ತಮ್ಮ ಆತ್ಮಸಂಗಾತಿಗಳಿಗಾಗಿ ಈ ಆತ್ಮಗಳು ಕಾಯುತ್ತಿರುತ್ತವೆ.

ಧ್ಯಾನದ ಕಾಲದಲ್ಲಿ, ನಮ್ಮಲ್ಲಿ ಬೌದ್ಧಿಕ ಕೋಶ ಇರುವವರೆಗೂ ಆಲೋಚನೆಗಳು ನಮ್ಮೊಡನೆ ಇರುತ್ತವೆ. ಇದಕ್ಕೆ ಕಾರಣ ನಮ್ಮ ಅರಿವು ಆಲೋಚನೆಗಳ ಮಟ್ಟದಲ್ಲಿಯೇ ಇರುತ್ತದೆ. ಇದರ ಬಗ್ಗೆ ನಾವು ಚಿಂತಿಸಬಾರದು ಮತ್ತು ಆಲೋಚನೆಗಳನ್ನು ಅಲಕ್ಷಿಸಬೇಕು. ನಮ್ಮ ಅರಿವು ಮೇಲೆ ಏರಿ ಆಲೋಚನೆಗಳ ಹಂತವನ್ನು ದಾಟಿ ಮುಂದೆ ಹೋದಾಗ, ನಮಗೆ ಆಲೋಚನೆಗಳ ಅರಿವು ಆಗುವುದಿಲ್ಲ. ನಾವು ಆಲೋಚನೆಗಳು ಇಲ್ಲದ ಅವಧಿಗಳನ್ನು ಮುಟ್ಟುತ್ತೇವೆ. ಸಾಧನೆ ಕೆಲವು ದಿನಗಳ ಧ್ಯಾನವಲ್ಲ; ಅದು ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುತ್ತದೆ. ಕೆಲವು ಸಲ ಒಂದು ಜೀವಿತಾವಧಿಯವರೆಗೆ ಹರಡಿರುತ್ತದೆ. ನಾವು ಅದಕ್ಕಾಗಿ ಶ್ರಮಿಸಬೇಕು.

ನಮ್ಮ ನಕಾರಾತ್ಮಕತೆಗಳ ಬಗ್ಗೆ ಜಾಗರೂಕರಾಗಿರೋಣ, ಒಮ್ಮೆ ಅವುಗಳನ್ನು ಗುರುತಿಸಿದರೆ ಅವನ್ನು ಕಿತ್ತೆಸೆಯಬಹುದು. ನಾವು ಸುಲಭವಾಗಿ ಅವುಗಳಿಂದ ಮೇಲೇರಬಹುದು. ಈ ನಕಾರಾತ್ಮಕತೆಗಳಿಗೆ ನಾವು ಸ್ಪಂದಿಸದಿದ್ದಾಗ, ಅದು ನಮ್ಮನ್ನು ಅಧ್ಯಾತ್ಮೀಕರಿಸುತ್ತದೆ. ಇದು ಅತ್ಯಂತ ಸವಾಲಿನ ಸಮಯ, ಅದು ಒಳ್ಳೆಯ ಮತ್ತು ಒಳ್ಳೆಯದಲ್ಲದರ ನಡುವಿನ ಹೋರಾಟ, ಅತಿ ತೀವ್ರ ಹೋರಾಟ. ಕಪ್ಪು ಚೈತನ್ಯಗಳು ಗೊಂದಲ ಸೃಷ್ಟಿಸುತ್ತದೆ, ಅದು ನಮ್ಮನ್ನು ಶಾಂತಿ ಮತ್ತು ದೇವರಿಂದ ದೂರ ಕೊಂಡೊಯ್ಯುತ್ತದೆ. ಆದ್ದರಿಂದ ನಾವು ಅತ್ಯಂತ ಎಚ್ಚರಿಕೆಯಿಂದ ಇರಬೇಕು, ಅದರಲ್ಲಿಯೂ ಪ್ರಳಯದ ಈ ಕಾಲದಲ್ಲಿ.

ಏಪ್ರಿಲ್, 1974ರಲ್ಲಿ ಹೊಸಯುಗ ಪ್ರಾರಂಭವಾಯಿತು. ಕಪ್ಪುಯುಗದಿಂದ ಹೊಸಯುಗದವರೆಗಿನ ಪರಿವರ್ತನೆಯ ಕಾಲ 432 ವರ್ಷಗಳು. ಇದು ಪ್ರಳಯ ಸಂಭವಿಸುವ, ಅತ್ಯಂತ ಕಷ್ಟಕರ ಹಂತ. ಇದು ಮಂಥನದ ಕಾಲ. ನಾವು ಕಪ್ಪುಯುಗದ ಹಳೆಯ ರೀತಿಗಳನ್ನು, ಭಾವೋದ್ವೇಗಗಳನ್ನು, ನಮ್ಮ ಧೋರಣೆಗಳನ್ನು ಮತ್ತು ಎಲ್ಲವನ್ನು ಬಿಟ್ಟುಕೊಡಬೇಕಾದ ಕಾಲವಿದು. ಇದು ಸಂಪೂರ್ಣ ಪರಿವರ್ತನೆಯ ಕಾಲ. ಆದ್ದರಿಂದ ಕಷ್ಟಕರ. ಕಪ್ಪು ಚೈತನ್ಯಗಳ ಪ್ರಭಾವದಿಂದ ಸುಲಭವಾಗಿ ಹೊರಗೆ ಬರಲು ಸಾಧ್ಯವಾಗದೇ ಇರುವುದರಿಂದ ಋಷಿಗಳು ನಮಗೆ ಅಷ್ಟೊಂದು ಚೈತನ್ಯಗಳನ್ನು ಮತ್ತು ಅವಕಾಶಗಳನ್ನು ನೀಡುತ್ತಾರೆ. ಅವುಗಳನ್ನು ನಾವು ಬಳಸಿಕೊಳ್ಳಬೇಕು. ಇಂತಹ ಇನ್ನೊಂದು ಸದವಕಾಶ ಈ ಯುಗಾದಿ.

06-04-2003

ಪ್ರಪಂಚದ ಯಾವುದೇ ಭಾಗದಲ್ಲಿನ ನೋವು ನಮಗೆ ತಾಗುತ್ತದೆ. ಆದ್ದರಿಂದ ನಾವು ಹೆಚ್ಚು ಧ್ಯಾನ ಮಾಡಬೇಕು. ನಾವು ಪ್ರೀತಿಯ ಕಂಪನಗಳನ್ನು ಮತ್ತು ಶಾಂತಿಯನ್ನು ಜಗತ್ತಿಗೆ ಕಳುಹಿಸಬೇಕಾಗಿರುವುದರಿಂದ ನಾವು ಎಷ್ಟು ಧ್ಯಾನ ಮಾಡಿದರೂ ಸಾಲದು.

ನಾವು ಸಪ್ತರ್ಷಿ ಪ್ರಾಣಾಯಾಮವನ್ನು ಅಭ್ಯಾಸ ಮಾಡಿದಾಗ, ಅತ್ಯಂತ ಸೂಕ್ಷ್ಮ ಪ್ರಾಣವನ್ನು ತೆಗೆದುಕೊಳ್ಳುತ್ತಿರುತ್ತೇವೆ. ಅದರಿಂದ ಅನೇಕ ಪ್ರಯೋಜನಗಳಿವೆ. ಅದರಲ್ಲಿ ಮುಖ್ಯವಾದುದೆಂದರೆ ಹಿಂದಿನ ಜನ್ಮಗಳ ಕೆಲವು ಕಠಿಣ ಕರ್ಮಗಳನ್ನು ಪರಿಹರಿಸುವುದು. ಋಷಿಗಳು ಇದನ್ನು ಈ ಭೂಮಿಯ ಮೇಲೆ ಮೊಟ್ಟಮೊದಲ ಬಾರಿಗೆ ಪರಿಚಯಿಸಿದ್ದಾರೆ.

ನಾವು ಧ್ಯಾನ ಮಾಡಿದಾಗ ಬುದ್ಧಿಯಾಚೆಗೆ ಹೋಗುತ್ತೇವೆ ಹಾಗೂ ಸತ್ಯವನ್ನು ನೇರವಾಗಿ ಮತ್ತು ಸಂಪೂರ್ಣವಾಗಿ ಕಾಣುತ್ತೇವೆ. ಇದು

## ಗುರೂಜಿ ಹೀಗೆ ಮಾತನಾಡಿದರು

(ಸಂ: ಶೋಭಾ ಕೆ. ರಾವ್; ಅನು: ಶಿವಪ್ರಕಾಶ್ ಎಲ್.)

ನಮ್ಮ ಅಪ್ರಜ್ಞಾವಸ್ಥೆಯ ಪದರದಲ್ಲಿರುತ್ತದೆ. ದೀರ್ಘಕಾಲದ ಧ್ಯಾನಾಭ್ಯಾಸ ಮಾತ್ರ ಇದು ಹೊರಗೆ ಕಾಣಿಸಲು ಸಹಾಯ ಮಾಡುತ್ತದೆ. ಋಷಿಗಳು ಬುದ್ಧಿಯಿಂದ ಆಚೆ ಹೋಗಿ, ಸತ್ಯವನ್ನು ಗ್ರಹಿಸಿ, ದೈವಿಕ ನೆಲೆಗಳಿಂದ ಜ್ಞಾನವನ್ನು ಕೆಳತರುತ್ತಾರೆ.

ನಾವು ಒಳ್ಳೆಯದನ್ನು ಅಭ್ಯಾಸ ಮಾಡಬೇಕೆಂದು ಅಮರರು ಹೇಳುತ್ತಾರೆ, ಏಕೆಂದರೆ ಅದು ಹತ್ತಿರದ ದಾರಿ. ಒಳ್ಳೆಯದನ್ನು ಅಭ್ಯಾಸ ಮಾಡುವುದರಲ್ಲಿ ನಾವು ಕೆಟ್ಟದ್ದನ್ನು ಬಿಟ್ಟುಕೊಡುತ್ತೇವೆ ಮತ್ತು ಅಂತಿಮವಾಗಿ ಒಳ್ಳೆಯದನ್ನೂ ದಾಟಿ ಮುಂದೆ ಹೋಗುತ್ತೇವೆ.

ಸೃಷ್ಟಿಯಾದ ಪ್ರತಿಯೊಂದು ಜೀವಿ ಮೋಕ್ಷವನ್ನು ಪಡೆಯುತ್ತದೆ. ದುಷ್ಟ ಜನರು ಅಥವಾ ಆತ್ಮಗಳು ಹೆಚ್ಚಿನ ಕಾಲ ತೆಗೆದುಕೊಳ್ಳುತ್ತಾರೆ. ಅವರು ಪ್ರಪಂಚಗಳು ನಾಶವಾಗುವವರೆಗೂ ಕಾಯುತ್ತಾರೆ ಅಥವಾ ಕೆಟ್ಟ ಭಾಗ ಸಂಪೂರ್ಣವಾಗಿ ನಾಶ ಮಾಡಲ್ಪಟ್ಟ ಒಂದು ಉನ್ನತ ಸ್ತರಕ್ಕೆ ಅವರನ್ನು ವರ್ಗಾಯಿಸಲಾಗುತ್ತದೆ. ಆಗ ಅವರು ಮೇಲೇರಲು ಪ್ರಾರಂಭಿಸುತ್ತಾರೆ.

ನಮ್ಮ ಕನಸುಗಳ ಮಹತ್ವವನ್ನು ನಾವು ತಿಳಿಯಲು ಪ್ರಯತ್ನಿಸುತ್ತೇವೆ. ಅದು ಸಹಜ. ನಮ್ಮ ಸುಷುಪ್ತಾವಸ್ಥೆಯ ಹಂತದಲ್ಲಿ, ನಾವು ಓದಿದ ಪುಸ್ತಕಗಳಿಂದ ಬಂದ ಜ್ಞಾನ, ಜನರನ್ನು ಆಲಿಸುವುದರಿಂದ ಬಂದ ಜ್ಞಾನ, ನಮ್ಮ ಸೂಕ್ಷ್ಮ ಅನುಭವಗಳು ಮತ್ತು ಈಡೇರದ ಆಸೆಗಳು ಇತ್ಯಾದಿಗಳ ಒಂದು ರೀತಿಯ ಮಿಶ್ರ ಜ್ಞಾನವಿರುತ್ತದೆ. ನಮಗೆ ಕನಸಾದಾಗ, ಕೆಲವುಸಲ ಇವೆಲ್ಲವೂ ವ್ಯಕ್ತಗೊಳ್ಳುತ್ತವೆ. ಅವು ಅಸಂಬದ್ಧ ಮತ್ತು ಗೊಂದಲಮಯ. ಆದ್ದರಿಂದ ಪ್ರತಿಯೊಂದು ಕನಸನ್ನೂ ವಿವರಿಸಲಾಗುವುದಿಲ್ಲ. ನಮ್ಮ ಅಂತರ್‌ಗ್ರಹಣ ಶಕ್ತಿಯನ್ನು ಚುರುಕುಗೊಳಿಸುವುದರಿಂದ ಮಾತ್ರ ಸತ್ಯ ಅಥವಾ ಕನಸಿನ ಮಹತ್ವವನ್ನು ತಿಳಿಯಲು ಸಾಧ್ಯ.

ಸೋಲುಗಳ ನಡುವೆಯೂ ನಾವು ಸತತ ಪ್ರಯತ್ನಗಳನ್ನು ಮಾಡುವುದನ್ನು ಮುಂದುವರಿಸಿದರೆ, ನಾವು ನಮ್ಮ ಬದುಕುಗಳನ್ನು ಮತ್ತು ನಮ್ಮ ಭವಿಷ್ಯಗಳನ್ನು ಬದಲಿಸಬಹುದು. ಇದೇ ಸಾಧನೆಯ ಒಳಗುಟ್ಟು.

ನಮ್ಮನ್ನು ಅಧ್ಯಾತ್ಮದ ಮಾರ್ಗದಿಂದ ವಿಮುಖರನ್ನಾಗಿಸುವ, ನಮ್ಮೊಳಗೇ ಇರುವ ಇನ್ನೊಬ್ಬ ವ್ಯಕ್ತಿ–ಅಹಂ ಅನ್ನು ನಾವೆಲ್ಲರೂ ಅನುಭವಿಸಿದ್ದೇವೆ. ಒಮ್ಮೆ ಇದನ್ನು ನಾವು ಗುರುತಿಸಿದರೆ, ಸುಲಭವಾಗಿ ಅದನ್ನು ಉಪೇಕ್ಷಿಸಲು ಆರಂಭಿಸಬಹುದು.

ಋಷಿಗಳ ಬಳಿಗೆ ಬರುವುದು ಸುಲಭವಲ್ಲ. ಯಾರು ತಮ್ಮ ಬೌದ್ಧಿಕ ಅನ್ವೇಷಣೆಗಳನ್ನೆಲ್ಲಾ ಬರಿದು ಮಾಡಿಕೊಂಡಿದ್ದಾರೋ ಮತ್ತು ಶರಣಾಗಲು ಬಯಸುತ್ತಾರೋ ಅವರಿಗೆ ಈ ಮಾರ್ಗ. ಜ್ಞಾನ ನಮ್ಮನ್ನು ವಿನಯವಂತರನ್ನಾಗಿ ಮಾಡುತ್ತದೆ ಮತ್ತು ನಾವು ದೇವರ ಮುಂದೆ ಶರಣಾಗಲು ಸಹಾಯ ಮಾಡುತ್ತದೆ.

ಧ್ಯಾನ ಮಾಡಿ ಹಾಗೂ ನಿಮ್ಮ ಭಾವೋದ್ವೇಗಗಳನ್ನು ಮತ್ತು ಆಲೋಚನೆಗಳನ್ನು ಸಕಾರಾತ್ಮಕಗೊಳಿಸಿ. ಆಗ ಅದ್ಭುತ ಪರಿಣಾಮಗಳು ಉಂಟಾಗುವುದನ್ನು ನೋಡುವಿರಿ, ನಾವು ದೈವೀಕರಾಗುತ್ತೇವೆ. ಇದನ್ನು ನಾವು ಅನುಭವಿಸಬಹುದು.

ಕೆಲವು ಸಲ ಧ್ಯಾನದ ಕಾಲದಲ್ಲಿ ನಾವು ಗೋಡೆಗೆ ಒರಗಿಕೊಳ್ಳಬಹುದು, ಆದರೆ ದಿಕ್ಕನ್ನು ಮಾತ್ರ ಬದಲಿಸಬಾರದು.

27–04–2003

ಬೇರೆ ಬೇರೆ ಹಂತಗಳಲ್ಲಿ ವಿಷಯಗಳು ವಿಭಿನ್ನ ಅನುಭವಗಳನ್ನು ಕೊಡುವುದರಿಂದ ನಾವು ಅವುಗಳಿಂದ ದೂರವಿರಬೇಕು, ಆದರೆ ನಿಜವಾದ ಅನುಭವ ಈ ಹಂತಗಳನ್ನು ಮೀರಿದ್ದು. ನಾವು ದೇಹ, ಮನಸ್ಸು, ಬುದ್ಧಿಯ ಹಂತಗಳಿಂದ ಆಚೆಗೆ ಪ್ರಜ್ಞೆಯ ಉನ್ನತ ಪದರಗಳಿಗೆ ಹೋಗಲು ಧ್ಯಾನ ಮಾಡುತ್ತೇವೆ. ನಾವು ಪರಿಶುದ್ಧರಾದಾಗ ಆ ಪದರಗಳಿಗೆ ಸುಲಭವಾಗಿ ಪ್ರವೇಶಿಸಬಹುದು ಮತ್ತು ವಿಸ್ತರಿಸಬಹುದು. ನಮ್ಮ ಜಾಗೃತಿ ಈ ವಿಸ್ತೃತ ಅನುಭವ ಪಡೆಯುವುದನ್ನು ಅನುಮತಿಸಲು ನಾವು ಧ್ಯಾನ ಮಾಡುತ್ತೇವೆ. ಮೀರಿ ಹೋಗುವುದು, ನಮ್ಮನ್ನು ಅನೇಕ ವಿಷಯಗಳಿಂದ ಪರಿತ್ಯಕ್ತರನ್ನಾಗಿ ಮಾಡುತ್ತದೆ.

ನಮ್ಮನ್ನು ಋಷಿಗಳು ಆಗಿಂದಾಗ್ಗೆ ಪರೀಕ್ಷಿಸುತ್ತಾರೆ, ಇದು ಧ್ಯಾನದ ಕಾಲದಲ್ಲಿ ಆಗದೇ ಇರಬಹುದು. ನಾವು ಎಷ್ಟರ ಮಟ್ಟಿಗೆ ಪ್ರೀತಿ ಮತ್ತು ಶಾಂತಿಯನ್ನು ವ್ಯಕ್ತಪಡಿಸಲು ಸಾಧ್ಯವೆಂಬುದನ್ನು ನೋಡುವುದು ಇದಾಗಿದೆ. ಇದು ಒಂದು ರೀತಿಯ ಸಿದ್ಧತೆ ಕೂಡಾ. ದೈವಿಕತೆ ಎಂಬುದು ಅನಂತ ಮತ್ತು ವಿಶಾಲ. ನಮ್ಮ ಪ್ರೀತಿ ಎಷ್ಟು ದೊಡ್ಡದಾಗಿರಬೇಕೆಂದರೆ ಅದು ಪ್ರತಿಯೊಬ್ಬರನ್ನು ಮತ್ತು ಎಲ್ಲವನ್ನು – ಇಡೀ ಸೃಷ್ಟಿಯನ್ನು ಒಳಗೊಂಡಿರಬೇಕು. ನಾವು ಆಧ್ಯಾತ್ಮಿಕ ಜೀವನವನ್ನು ಕೈಗೊಂಡ ಮೇಲೆ ನಮ್ಮನ್ನು ನಾವು ಬದಲಿಸಿಕೊಳ್ಳಬೇಕು. ನಾವು ಒಂದು ಸಲ ಅಥವಾ ಕೋಟಿ ಸಲ ವಿಫಲರಾದರೆ, ನಮಗೆ ಬೆಳೆಯಲು ಮತ್ತು ಪರಿವರ್ತಿತರಾಗಲು ಇನ್ನೊಂದು ಅವಕಾಶ ಇದ್ದೇ ಇರುತ್ತದೆ.

ಆದರೆ ನಾವು ಋಷಿಗಳ ಕೆಲಸ ತೆಗೆದುಕೊಂಡ ಮೇಲೆ, ನಿಗದಿತ ಅವಧಿಯಲ್ಲಿ ನಾವು ಸಿದ್ಧರಿಲ್ಲದಿದ್ದಾಗ, ಅವರು 'ನೀವು ಸಿದ್ಧರಾಗಿ' ಎನ್ನುತ್ತಾರೆ ಮತ್ತು ಇನ್ನೊಬ್ಬರಿಗೆ ಅವಕಾಶವನ್ನು ಕೊಡುತ್ತಾರೆ.

ನಾನು ಈ ಭೌತಿಕ ರೂಪದಲ್ಲಿ ಸಿಗುವಾಗ, ನೀವು ಹೆಚ್ಚು ಜ್ಞಾನ ಮತ್ತು ಹೊಸ ಚೈತನ್ಯಗಳನ್ನು ನನ್ನಿಂದ ಪಡೆದುಕೊಳ್ಳಬೇಕು. ನಿಮ್ಮ ಅನುಮಾನಗಳನ್ನೆಲ್ಲ ಪರಿಹರಿಸಿಕೊಳ್ಳಬಹುದು, ನಿಮ್ಮ ಪ್ರಶ್ನೆಗಳಿಗೆಲ್ಲ ಉತ್ತರ ಪಡೆದುಕೊಳ್ಳಬಹುದು. ನೀವು ಆಧ್ಯಾತ್ಮಿಕವಾಗಿ ಎಲ್ಲೆಮೀರಿ ಬೆಳೆಯಬಹುದು. ನಾನು ಋಷಿಗಳಿಗೆ ನಿಕಟವಾಗಿದ್ದೇನೆ ಮತ್ತು ನನ್ನೊಂದಿಗೆ ನಿಮ್ಮನ್ನು ಕರೆದೊಯ್ಯಬಲ್ಲೆ. ನೀವು ಋಷಿಗಳ ಸಮೀಪಕ್ಕೆ ಬರಬಹುದು.

ಕೆಲವು ಸಲ ಸಾಮೀಪ್ಯ ಒಂದು ರೀತಿಯ ಅನೌಪಚಾರಿಕತೆಯನ್ನು ತರುತ್ತದೆ. ನಾನು ಯಾವಾಗಲೂ ಋಷಿಗಳೊಂದಿಗೆ ಸಂಪರ್ಕದಲ್ಲಿರುವುದನ್ನು ನೀವು ಮರೆಯುತ್ತೀರಿ, ನೀವು ನನ್ನ ಮಾತುಗಳನ್ನು ಉಪೇಕ್ಷಿಸುತ್ತೀರಿ, ಋಷಿಗಳನ್ನು ಅನುಸರಿಸುವುದಿಲ್ಲ; ನೀವು ಒಂದು ಅವಕಾಶ ಕಳೆದುಕೊಳ್ಳುವಿರಿ.

ನಾವು ಋಷಿಗಳನ್ನು ಅರ್ಥ ಮಾಡಿಕೊಂಡಿದ್ದರೆ, ನಮ್ಮಲ್ಲಿ ಅಭದ್ರತೆಯ ಭಾವನೆ ಇದ್ದಾಗ, ದೇವರು ಮತ್ತು ಋಷಿಗಳ ಬಳಿಗೆ ಹೋಗಲು ಮತ್ತು ಸಹಾಯ ಪಡೆಯಲು ನಾವು ಹಿಂಜರಿಯುವುದಿಲ್ಲ. ದೇವರಲ್ಲಿ ಎಲ್ಲ ಸಮಸ್ಯೆಗಳು ಕೊನೆಗೊಳ್ಳುತ್ತವೆ. ಪ್ರಳಯದ ಉದ್ದೇಶವೆಂದರೆ ನಮ್ಮನ್ನೆಲ್ಲಾ ದೇವರತ್ತ, ಮೌಲ್ಯ ವ್ಯವಸ್ಥೆಯತ್ತ ಮತ್ತು ಸತ್ಯಯುಗದತ್ತ ಕರೆದೊಯ್ಯುವುದು.

ವ್ಯಕ್ತಿ ಯಾವುದನ್ನು ತನಗಾಗಿ ಆಯ್ಕೆ ಮಾಡಿಕೊಳ್ಳುತ್ತಾನೋ ಅದು ಅವನಲ್ಲಿ ಶಾಶ್ವತವಾಗಿ ಉಳಿಯುತ್ತದೆ. ನಾವೆಲ್ಲ ಇಲ್ಲಿರುವುದು ನಮ್ಮ ಆಯ್ಕೆಗಳಿಂದ. ಆದರೆ ಮತ್ತೆ ಈ ಮಾರ್ಗವನ್ನು ಬಿಟ್ಟು ಹೋಗುವಂತೆ ನಮ್ಮನ್ನು ನಾವು ಒತ್ತಾಯ ಮಾಡಬಾರದು.

ತಪೋನಗರದಲ್ಲಿ ಸಮುದಾಯ ಜೀವನದ ಬಗ್ಗೆ ತಪೋನಗರದಲ್ಲಿ ವಾಸ ಮಾಡದ ಒಬ್ಬ ವ್ಯಕ್ತಿಯಿಂದ ಅನೇಕ ಸಲಹೆಗಳನ್ನು ನಾನು ಪಡೆದೆ!

ನಾವು ಇಲ್ಲಿ ಮಾಡುವ ಯಾವುದೇ ಕೆಲಸವನ್ನು, ಅದೇ ಉತ್ಸಾಹದಿಂದ ಮತ್ತು ಎಂದೂ ವಿಫಲವಾಗದಂತೆ ಮುಂದುವರಿಸಿಕೊಂಡು ಹೋಗಲು ನಾನು ಒಬ್ಬ ವ್ಯಕ್ತಿ ಅಥವಾ ಒಂದು ಗುಂಪನ್ನು ತಯಾರುಮಾಡಲು ಬಯಸಿದ್ದೇನೆ. ಪ್ರೀತಿ ವ್ಯಕ್ತಪಡಿಸುವುದು, ಋಷಿಗಳ ಸನಿಹಕ್ಕೆ ಬರುವುದು, ಅವರೊಂದಿಗೆ ಲಘು ಸಂಪರ್ಕ ಹೊಂದುವುದು ಈ ತರಬೇತಿಯ ಉದ್ದೇಶವಾಗಿದೆ. ನಾವು 'ನನಗೆ ತಿಳಿದಿಲ್ಲ' ಎಂದು ಹೇಳಲು ಮತ್ತು ವಿನಯವಂತರಾಗಿರಲು ಕಲಿಯುತ್ತೇವೆ. ನಮ್ಮ ಆಸಕ್ತಿ ಮತ್ತು ಆಗ್ರಹವೆಂದರೆ ಅವರು 24 ಗಂಟೆಗಳೂ ಇಲ್ಲಿರಬೇಕು, ಅವರು ನಿರಂತರವಾಗಿ ಋಷಿಗಳ ಕೆಲಸದ ಬಗ್ಗೆ ಯೋಚಿಸಬೇಕು ಮತ್ತು ಋಷಿಗಳೊಂದಿಗೆ ಬದುಕಬೇಕು.

ಹಿಂದು ಅಥವಾ ಕ್ರೈಸ್ತ ದೇವರು ಇಲ್ಲ ಎಂಬುದನ್ನು ನಾವು ಅರಿತುಕೊಳ್ಳೋಣ. ನಾವು ಸತ್ಯವನ್ನು ಅರ್ಥ ಮಾಡಿಕೊಂಡರೆ, ನಮ್ಮನ್ನು ದೇವರಿಂದ ದೂರವಿಡುವಂತಹ ಅನೇಕ ಮಾನವ ನಿರ್ಮಿತ ಪ್ರತ್ಯೇಕ ವಿಭಾಗಗಳನ್ನು ತಿಳಿಯುತ್ತೇವೆ. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರುವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲಿಷ್‌ನಲ್ಲಿ (ವರ್ಷಕ್ಕೆ ರೂ. 2000/–), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 1000/–) ಪಾಠಗಳನ್ನು ಕಳುಹಿಸಲಾಗುವುದು.

ವಾರ್ಷಿಕ ಫೀನಲ್ಲಿ ಪಠ್ಯ ಪುಸ್ತಕಗಳು ಮತ್ತು ವಾರ್ತಾಪತ್ರಿಕೆಯ ಒಂದು ವರ್ಷದ ಚಂದಾ ಸೇರಿರುತ್ತದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ಎಲ್ಲಾ ಪ್ರಶ್ನೆ – ಸಂದೇಹಗಳಿಗೆ ಜಯಂತ್ ದೇಶಪಾಂಡೆಯವರು ಉತ್ತರಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಲೈಟ್ ಏಜ್ ಫೌಂಡೇಶನ್(ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಜಯಂತ್ ದೇಶ್‌ಪಾಂಡೆಯವರ ಭಾಷಣದ ಆಯ್ದ ಭಾಗಗಳು

ಸಂ: ಶೋಭಾ ಕೆ.ರಾವ್; ಅನು: ಸುಧಾಕರ್

ಅಮರರವರನ್ನು ಭೇಟಿಮಾಡುವುದೆಂದರೆ ಒಂದು ವಿಶ್ವವಿದ್ಯಾನಿಲಯವನ್ನು ಪ್ರವೇಶಿಸಿದಂತೆ ಎಂದು ಗುರೂಜಿಯವರು ಹೇಳುತ್ತಿದ್ದರು. ಅವರು ಜ್ಞಾನ ಮತ್ತು ವಿವೇಕದ ಒಂದು ಮಹಾಸಾಗರವಾಗಿದ್ದರು. ಮಾನವ ಮಟ್ಟದಲ್ಲಿ ಇಂಥ ಅತ್ಯಾಶ್ಚರ್ಯಕರ ಸಾಮರ್ಥ್ಯವನ್ನು ಹೊಂದಿದ್ದರೂ ಕೂಡ ಅವರು ಪರಿಪೂರ್ಣ ಮಾನವರಾಗಿದ್ದರು.

ನಮ್ಮ ಈಗಿನ ಪ್ರಪಂಚವನ್ನು ನೋಡಿದಾಗ, ಸತ್ಯಯುಗದ ನಮ್ಮ ಕನಸು ದೂರದ ವಾಸ್ತವವೆನ್ನಿಸುವ ಸಾಧ್ಯತೆಯಿದೆ. ಆದರೆ ಈ ಕನಸನ್ನು ಮಹರ್ಷಿ ಅಮರರವರು ಮತ್ತು ಗುರೂಜಿಯವರು ನಂಬಿದ್ದರು ಮತ್ತು ಉಜ್ವಲವಾದ ಭವಿಷ್ಯವನ್ನು ನೋಡಿದ್ದರು. ಅದಕ್ಕಾಗಿ ನಾವು ಕೆಲಸ ಮಾಡಬೇಕು. ನಮ್ಮ ಪ್ರಯತ್ನ ನಮ್ಮ ಸುತ್ತಲಿನ ಜನರನ್ನು ಸ್ಪರ್ಶಿಸುತ್ತದೆ. ವಿಶ್ವ ಚಾನಲ್ಸ್ ದಿನವಾದ ಫೆಬ್ರವರಿ 1, 2013ರಂದು ನಡೆದ ರೀತಿಯಲ್ಲಿ, ಅವು ವಿಶ್ವವನ್ನು ಸ್ಪರ್ಶಿಸುತ್ತವೆ. ಅಂದು ವಿಶ್ವವು ತನ್ನ ಅನುಗ್ರಹವನ್ನು ನಮ್ಮ ಮೇಲೆ ಹರಿಸಿತ್ತು.

ನಮ್ಮಲ್ಲಿರುವ ಮಾನವ ಅಂಶವನ್ನು ನಾವು ಅಭಿವ್ಯಕ್ತಿಸಲು ಪ್ರಾರಂಭಿಸಬೇಕು. ಮಹರ್ಷಿ ಅಮರರವರು ಮತ್ತು ಗುರೂಜಿಯವರು ಸಾಧಾರಣ ಮನುಷ್ಯರ ರೀತಿಯಲ್ಲಿ ಜೀವಿಸುತ್ತಿದ್ದರೂ ತಮ್ಮ ಜೀವನದಲ್ಲಿ ದೈವೀಪ್ರೀತಿಯನ್ನು ಅಭಿವ್ಯಕ್ತಿಸುತ್ತಿದ್ದರು. ಅವರಿಗೆ ಅದನ್ನು ಮಾಡಲು ಸಾಧ್ಯವಾದಂತೆ, ನಮಗೆ ಕೂಡ ಸಾಧ್ಯವಿದೆ. 'ಗುರಿಗಿಂತ ಗುರಿಯೆಡೆಗಿನ ಪ್ರಯಾಣ ಹೆಚ್ಚು ಸ್ವಾರಸ್ಯಕರವಾಗಿರುತ್ತದೆ' ಎಂದು ಗುರೂಜಿಯವರು ಹೇಳುತ್ತಿದ್ದರು. ಈ ಪ್ರಯಾಣ, ಪ್ರಯತ್ನ ಮತ್ತು ಹೋರಾಟದಲ್ಲಿಯೇ ಒಂದು ಸೌಂದರ್ಯವಿದೆ. ಪರಿಪೂರ್ಣತೆಯ ಕಡೆಗೆ ಸಾಗುವಲ್ಲಿನ ಪ್ರಯತ್ನ ಮತ್ತು ಪ್ರಾಮಾಣಿಕತೆಯನ್ನು ಮೆಚ್ಚಲಾಗುತ್ತದೆ ಮತ್ತು ಪ್ರತಿಫಲ ನೀಡಲಾಗುತ್ತದೆ.

ನಮ್ಮ ಕರ್ಮಗಳನ್ನು ಗುರೂಜಿಯವರು ತೆಗೆದುಕೊಂಡಿದ್ದಾರೆ ಎಂದು ತೋರುತ್ತದೆ. ಬಹಳ ಸಮಯದಿಂದ ಕಾಡುತ್ತಿದ್ದ ಸಮಸ್ಯೆಗಳು ಈಗ ಇಲ್ಲವಾಗಿವೆ. ಇದನ್ನು ನನ್ನ ಮತ್ತು ಇತರರ ಅನುಭವಗಳನ್ನು ಆಧರಿಸಿ ನಾನು ಹೇಳುತ್ತಿದ್ದೇನೆ. ಇದು ತೀವ್ರವಾದ ಪ್ರಳಯದ ಅವಧಿ, ಕೋಲಾಹಲಗಳ ಅವಧಿ ಮತ್ತು ನಕಾರಾತ್ಮಕತೆಗಳು ಮಾತ್ರವಲ್ಲದೆ ಸಕಾರಾತ್ಮಕತೆಗಳು ಕೂಡ ಮೇಲೆ ಕಾಣಿಸಿಕೊಳ್ಳುವ ಅವಧಿ. ನಮಗೆ ಈಗಾಗಲೇ ಅನುಭವಕ್ಕೆ ಬರುತ್ತಿರುವಂತೆ, ಇದು ಅನುಗ್ರಹವನ್ನು ಪಡೆಯುವ ಅವಧಿ ಕೂಡ ಆಗಿದೆ.

ಪ್ರಪಂಚ ಬದಲಾಗದಿರಬಹುದು ಆದರೆ ನಾವು ಬದಲಾಗಬಹುದು. ನಾವು ಇದನ್ನು ಆಯ್ಕೆ ಮಾಡಿಕೊಂಡು ಬದಲಾಗಲು ಪ್ರಾರಂಭಿಸಿದಾಗ, ನಮಗೆ ಎಲ್ಲ ಸಹಾಯವೂ ದೊರೆಯುತ್ತದೆ.

ಇಲ್ಲಿಯ ಎಲ್ಲ ಕೆಲಸಗಳೂ ಚೆನ್ನಾಗಿ ಆಗುತ್ತಿವೆ ಎಂದು ಅನೇಕರು ಹೇಳಿದರು ಮತ್ತು ನನ್ನನ್ನು ಶ್ಲಾಘಿಸಿದರು. ಗುರೂಜಿಯವರು ಇಲ್ಲಿನ ಎಲ್ಲ ವ್ಯವಸ್ಥೆಗಳನ್ನೂ ಬಹಳ ಸಮರ್ಪಕವಾಗಿ ಅಣಿಗೊಳಿಸಿದ್ದಾರೆ ಎಂದು ಪ್ರಾಮಾಣಿಕವಾಗಿ ಮತ್ತು ವಿನಯದಿಂದ ನಾನು ಒಪ್ಪಿಕೊಳ್ಳಬೇಕು. ಅನೇಕ ಶಿಕ್ಷಕರಿಗೆ, ಕಾರ್ಯಕರ್ತರಿಗೆ, ಟ್ರಸ್ಟಿಗಳಿಗೆ ಅವರು ವೈಯಕ್ತಿಕವಾಗಿ ತರಬೇತಿ ನೀಡಿದ್ದಾರೆ ಮತ್ತು ಅವರೆಲ್ಲರೂ ತುಂಬಾ ಚೆನ್ನಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಗುರೂಜಿಯವರ ಅಂತ್ಯಕ್ರಿಯೆ ನಡೆದ ಸ್ಥಳದಲ್ಲಿ ನಿರ್ಮಾಣಗೊಂಡಿರುವ ಕಟ್ಟಡಕ್ಕಾಗಿ ಧಾರಾಳವಾಗಿ ಧನಸಹಾಯ ಮಾಡಿದ ಪ್ರತಿಯೊಬ್ಬರಿಗೂ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ನಾವು ಪ್ರತಿಯೊಬ್ಬರೂ ನಮ್ಮೊಳಗೆ, ತುಂಬ ಸಕಾರಾತ್ಮಕವಾದ ಒಂದು ಸುಂದರ ಭಾಗವನ್ನು ಹೊಂದಿದ್ದೇವೆ. ಅದು ನಮ್ಮ ನೈಜ ಗುಣ. ಅದು ಗುರೂಜಿಯವರು ಹೇಳುತ್ತಿದ್ದಂಥ 'ಒಳ್ಳೆಯತನ' ಆಗಿರಬಹುದು. ಅದು ಪ್ರಾಮಾಣಿಕತೆ, ಶುದ್ಧತೆ, ಅನುಕಂಪ ಮತ್ತು ಪ್ರೀತಿಗಳಾಗಿರಬಹುದು. ಹಾಗೆಯೇ, ಅಷ್ಟೊಂದು ಸಕಾರಾತ್ಮಕವಲ್ಲದ ಭಾಗವನ್ನು ಕೂಡ ನಾವು ಹೊಂದಿದ್ದೇವೆ. ನಕಾರಾತ್ಮವೆನ್ನಬಹುದಾದ ಸ್ವಲ್ಪ ಪ್ರಮಾಣದ ಕೋಪ, ಅಸೂಯೆ, ದ್ವೇಷ ಅಥವಾ ಯಾವುದೇ ರೀತಿಯ ನಕಾರಾತ್ಮಕತೆಯನ್ನು ನಾವು ಹೊಂದಿದ್ದೇವೆ. ಆದರೆ ಅವು ನಮ್ಮ ನೈಜ ಗುಣಗಳಲ್ಲ. ನಾವು ಈ ನಕಾರಾತ್ಮಕತೆಯನ್ನು ಹೊಂದಿದ್ದಾಗ ಸಹಜವಾಗಿಯೇ ಅವುಗಳನ್ನು ವ್ಯಕ್ತಗೊಳಿಸುತ್ತೇವೆ ಕೂಡ. ಪ್ರತಿಯೊಂದು ಕ್ಷಣವೂ ನಮ್ಮ ನೈಜ ಗುಣಗಳನ್ನು ವ್ಯಕ್ತಗೊಳಿಸುವುದೇ ಸಾಧನೆಯ ಉದ್ದೇಶ.

ಭಗವದ್ಗೀತೆಯ ಒಂದು ವಿಷಯವನ್ನು ಗುರೂಜಿಯವರು ವಿವರಿಸುತ್ತಿದ್ದರು. ಭಗವಾನ್ ಕೃಷ್ಣ ಹೇಳುತ್ತಾರೆ "ಯೋಗಸ್ಥಃ ಕುರು ಕರ್ಮಾಣಿ". ಹಾಗೆಂದರೆ, 'ಯೋಗದಲ್ಲಿದ್ದು ಎಲ್ಲ ಕೆಲಸಗಳನ್ನು ಮಾಡುವುದು; ಇಡೀ ಜೀವನವನ್ನು ದೈವೀ ಪ್ರಜ್ಞೆಯಲ್ಲಿ ಜೀವಿಸುವುದು.'

ಗುರೂಜಿಯವರು 1996ರಲ್ಲಿ ಕೆಳತಂದ ಮಹಾಕುಂಡಲಿನೀ ಚೈತನ್ಯವು ಈ ಭೂಮಿಯ ಮೇಲಿರುವ ಜನರಿಗಾಗಿ ಇದೆ. ಈ ಚೈತನ್ಯಗಳು ಜನರಿಗೆ ತಮ್ಮನ್ನು ಶುದ್ಧೀಕರಿಸಿಕೊಳ್ಳಲು, ತಮ್ಮ ಕರ್ಮಗಳ ನಿವಾರಣೆ ಮಾಡಿಕೊಳ್ಳಲು ಸಹಾಯ ಮಾಡುತ್ತವೆ. ಅವುಗಳು ಜನರನ್ನು ಉನ್ನತ ಜೀವನಕ್ಕಾಗಿ, ಉನ್ನತ ಅನುಭವಗಳಿಗಾಗಿ, ಉನ್ನತ ಜ್ಞಾನವನ್ನು ಗ್ರಹಿಸುವುದಕ್ಕಾಗಿ ಸಿದ್ಧಪಡಿಸುತ್ತವೆ. ನಂತರದಲ್ಲಿ, ಗುರೂಜಿಯವರು ಅತ್ಯಂತ ಶಕ್ತಿಶಾಲಿಯಾದ 'ರಾ' ಚೈತನ್ಯವನ್ನೊಳಗೊಂಡಂತೆ ಅನೇಕ ಚೈತನ್ಯಗಳನ್ನು ಕೆಳತಂದರು. ಇವೆಲ್ಲವನ್ನೂ ಈ ಭೂಮಿಯ ಮೇಲಿನ ಜನರು ತಿಳಿದುಕೊಂಡಿರಬೇಕಾಗಿಲ್ಲ, ಆದರೆ ಈ ಚೈತನ್ಯಗಳು ಅವರೆಲ್ಲರಿಗೂ ಲಭ್ಯವಿದೆ ಎಂದು ಗುರೂಜಿಯವರು ಹೇಳಿದರು. ಇದು ಮಾಸ್ಟರ್‌ಗಳು ಕೆಲಸ ಮಾಡುವ ರೀತಿ! ■

# ಪ್ರಶ್ನೆಗಳು ಮತ್ತು ಉತ್ತರಗಳು

(ಸಂಗ್ರಹ: ಶೋಭಾ ಕೆ ರಾವ್; ಅನು: ಶ್ಯಾಮಲಾದೇವಿ)

**ಪ್ರ: ಭೌತ ಶರೀರ ಬೆಳಕಿನ ಶರೀರವಾಗಿ ಬದಲಾಗಲು ಎಷ್ಟು ಸಮಯ ಬೇಕು?**

ಉ: ಅದು ವ್ಯಕ್ತಿಗತ ಪ್ರಯತ್ನವನ್ನು ಅವಲಂಬಿಸಿದೆ. ಅದು ಯಾವಾಗಲೂ ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುತ್ತದೆ. ಆದರೆ ಅದಕ್ಕೆ ಮೊದಲು ಪರಿವರ್ತನೆಯ ಅಗತ್ಯವಿದೆ. ನಾವು ಬದಲಾಗಲು ಇಚ್ಛಿಸುತ್ತೇವೆ ಎಂದು ಪ್ರಾಮಾಣಿಕವಾಗಿ ಸಂಕಲ್ಪ ಮಾಡಬೇಕು. ನಂತರ, ಬೆಳಕಿನ ಶರೀರದ ಮಾರ್ಪಾಡು ಜೊತೆಜೊತೆಯಾಗಿ ಸಂಭವಿಸಬಹುದು. ಇದಕ್ಕೆ ನಾವು ಕೆಲವು ವಿಶೇಷ ತಂತ್ರಗಳನ್ನು ಅಭ್ಯಾಸ ಮಾಡಬೇಕು, ಅದರಲ್ಲಿ ಬಹಳಷ್ಟು ಸಮಯ ಕಳೆಯಬೇಕು. ಆ ತಂತ್ರಗಳು ನಮಗೆ ಇನ್ನೂ ಸಿಗಬೇಕಿದೆ.

**ಪ್ರ: ನಾವೆಲ್ಲ ವಿವಿಧ ಮೂಲಗಳಿಂದ ಬರುತ್ತೇವೆ. ಇದು ನಾವು ಮಾಡುವ ಆಯ್ಕೆಗಳನ್ನು ಯಾವ ರೀತಿಯಲ್ಲಾದರೂ ಪ್ರಭಾವ ಬೀರುತ್ತದೆಯೇ?**

ಉ: ಖಂಡಿತವಾಗಿ. ನೀವು ವ್ಯಕ್ತಿಗಳನ್ನು ಗಮನವಿಟ್ಟು ನೋಡಿದರೆ ಆಗ ಬಹುಶಃ ನಿಮಗೆ ಅವರು ಬೇರೆ ಎಂದು ತಿಳಿಯುತ್ತದೆ. ಏನನ್ನು ಒಬ್ಬ ವ್ಯಕ್ತಿ ಸುಲಭವಾಗಿ ಅರ್ಥಮಾಡಿಕೊಳ್ಳುವನೋ ಅದನ್ನು ಮತ್ತೊಬ್ಬ ವ್ಯಕ್ತಿಗೆ ಅರ್ಥಮಾಡಿಕೊಳ್ಳಲು ಬಹಳ ಕಷ್ಟವಾಗುತ್ತದೆ. ಇದಕ್ಕೆ ಕಾರಣ ಅವನ ಮೂಲ. ಕೆಲವರು ಉತ್ತಮ ಧ್ಯಾನಿಗಳಾಗಿಲ್ಲದಿರಬಹುದು, ಅವರು ಆಗಬೇಕಾಗಿಲ್ಲ, ಆದರೂ ಅವರು ತಮ್ಮ ಮುಕ್ತಿಯನ್ನು ತಮ್ಮದೇ ಆದ ರೀತಿಯಲ್ಲಿ ಹೊಂದುತ್ತಾರೆ. ಅವರಿಗೂ ಕೂಡ ಋಷಿಗಳಲ್ಲಿ ಯೋಜನೆಗಳಿವೆ. ಋಷಿಗಳಲ್ಲಿ ಪ್ರತಿಯೊಬ್ಬರಿಗೂ ಯೋಜನೆಗಳಿವೆ.

**ಪ್ರ: ಒಬ್ಬ ವ್ಯಕ್ತಿಗೆ ಒಂದು ಸನ್ನಿವೇಶವನ್ನು ಯುಕ್ತವಾಗಿ ನಿರ್ವಹಿಸಲು ಆಗದಿದ್ದಲ್ಲಿ ಅದು ಅವನು ಬೆಳೆಯಲು ಸಿದ್ಧನಿಲ್ಲ ಎಂಬುದನ್ನು ಸೂಚಿಸುತ್ತದೆಯೇ?**

ಉ: ಒಬ್ಬ ವ್ಯಕ್ತಿಗೆ ಒಂದು ಸನ್ನಿವೇಶವನ್ನು ಎದುರಿಸಲು ಆಗದಿದ್ದರೆ ಅದು ಅವನ ಪರಿಮಿತಿ, ಅಷ್ಟೆ. ಅವನ ಬೆಳೆಯುವ ಇಚ್ಛೆಗೂ ಅದಕ್ಕೂ ಸಂಬಂಧವಿಲ್ಲ. ಇವೆರಡೂ ಬೇರೆಬೇರೆ.

**ಪ್ರ: ಆತ್ಮದ ಮಟ್ಟದಿಂದ ಆಯ್ಕೆ ಎಂಬುದರ ಮೂಲ ಅರ್ಥ ಏನು?**

ಉ: ಹಾಗೆಂದರೆ ಪ್ರಾಮಾಣಿಕವಾಗಿರುವುದು. ಇಲ್ಲಷ್ಟೇ ಅಲ್ಲ, ಪ್ರತಿಯೊಂದು ಆಧ್ಯಾತ್ಮಿಕ ಮಾರ್ಗದಲ್ಲಿ ನಾವು ಪ್ರಾಮಾಣಿಕರಾಗಿರಬೇಕು.

**ಪ್ರ: ನನಗೆ ಆಧ್ಯಾತ್ಮಿಕವಾಗಿ ಬೆಳೆಯಲು ಇಚ್ಛೆಯಿದೆ ಆದರೆ ಅದಕ್ಕೆ ಅಡಚಣೆಗಳು ಎದುರಾಗುತ್ತವೆ. ದಯವಿಟ್ಟು ಸಲಹೆ ಕೊಡಿ.**

ಉ: ಅಡಚಣೆಗಳನ್ನು ಗುರುತಿಸಿ, ಅವನ್ನು ನೀವು ತೊಡೆದುಹಾಕಲು ಸಾಧ್ಯವಿದೆ. ನಿಜವಾಗಿಯೂ ಬದಲಾಗಲು ಇಚ್ಛಿಸುವ ವ್ಯಕ್ತಿಗೆ ಯಾವುದೇ ಅಡಚಣೆಗಳಿರುವುದಿಲ್ಲ.

**ಪ್ರ: ಕೆಲವು ಬಾರಿ ನನಗೆ ಬೆಳಕಿನ ಕಣಗಳು ಕಾಣಿಸುತ್ತವೆ. ಅವು ಏನು?**

ಉ: ಕೆಲವು ಬಾರಿ ಕಷ್ಟಗಳಿಂದ ಜನರಿಗೆ ಧ್ಯಾನ ಮಾಡಲು ಆಗುವುದಿಲ್ಲ ಮತ್ತು ಅವರಿಗೆ ಸಹಾಯ ಬೇಕಾಗಿರುತ್ತದೆ. ಸಹಾಯ, ಬೆಳಕಿನ ಕಣಗಳ ರೂಪದಲ್ಲಿ ಬರುತ್ತದೆ. ಅವು ಚೈತನ್ಯಗಳಾಗಿರುತ್ತವೆ. ಅವು ಒಂದು ವಿಶೇಷ ಅನುಗ್ರಹದ ಸೂಚಕ ಕೂಡ. ಋಷಿಗಳಿಂದ ಸಂದೇಶಗಳು ಇದ್ದಾಗಲೆಲ್ಲ, ನೀವು ಈ ಬೆಳಕಿನ ಕಣಗಳನ್ನು ನೋಡುತ್ತೀರಿ. ಅಂಥ ಸಮಯಗಳಲ್ಲಿ, ಸಾಧ್ಯವಾದರೆ ನಿಮ್ಮ ಕಣ್ಣುಗಳನ್ನು ಮುಚ್ಚಿ, ಆಲಿಸಲು ಪ್ರಯತ್ನಿಸಿ ಮತ್ತು ಸಂದೇಶವನ್ನು ಗ್ರಹಿಸಲು ಪ್ರಯತ್ನಿಸಿ. ನಿಮಗೆ ಯಾವುದೇ ಧ್ವನಿ ಕೇಳಿಸುವುದಿಲ್ಲ, ಆದರೆ ಒಂದು ಮಿಂಚು ಉಂಟಾಗುತ್ತದೆ, ಮತ್ತು ನೀವು ಸಂದೇಶವನ್ನು ಅರ್ಥಮಾಡಿಕೊಳ್ಳುತ್ತೀರಿ. ಅದನ್ನು ಓದಿ. ಅದನ್ನು ಒಪ್ಪಿಕೊಳ್ಳಿ. ಅದನ್ನು ವಿಶ್ಲೇಷಿಸಲು ಪ್ರಯತ್ನಿಸಬೇಡಿ.

**ಪ್ರ: ನಾನು ಅಧ್ಯಾತ್ಮಕ್ಕೆ ಸಿದ್ಧನಾಗಿದ್ದೇನೆಯೇ?**

ಉ: ನೀವು ಈ ಪ್ರಶ್ನೆಯನ್ನು ಕೇಳಿರುವುದೇ ನೀವು ಸಿದ್ಧರಾಗಿರುವುದನ್ನು ಸೂಚಿಸುತ್ತದೆ. ಸತ್ಯವೇನೆಂದರೆ ಪ್ರತಿಯೊಬ್ಬರೂ ಅಧ್ಯಾತ್ಮಕ್ಕೆ ಸಿದ್ಧವಾಗಿದ್ದಾರೆ. ನಮಗೆ ಅದರ ಅರಿವಿಲ್ಲ. ನಾವು ಅಧ್ಯಾತ್ಮವನ್ನು ಕೈಗೆತ್ತಿಕೊಳ್ಳಬೇಕೆಂಬುದನ್ನು ಮನಗಂಡಾಗಲೂ, ಹೇಗೋ ನಾವು ಅದನ್ನು ಮಾಡುವುದಿಲ್ಲ.

**ಪ್ರ: ನಾನು ದೀರ್ಘಕಾಲ ಧ್ಯಾನ ಮಾಡುತ್ತಿದ್ದರೂ ನನಗೆ ಬೆಳಕನ್ನು ಅನುಭವಿಸಲು ಆಗಿಲ್ಲ. ಏಕೆ?**

ಉ: ನೀವು ಪ್ರತಿಯೊಬ್ಬರೂ, ನಿಮಗೆ ಬೆಳಕನ್ನು ಅನುಭವಿಸಲು ಏಕೆ ಆಗಿಲ್ಲ ಎಂಬುದನ್ನು ನೀವಾಗಿಯೇ ಕಂಡುಕೊಳ್ಳಬೇಕು. ಬಹಳಷ್ಟು ಸಾರಿ ನೀವು ಯಾಂತ್ರಿಕವಾಗಿ ಧ್ಯಾನ ಮಾಡುತ್ತೀರಿ. ನಿಮ್ಮ ಅಂತರಂಗದಲ್ಲಿ ಪ್ರೀತಿ ಇದ್ದರೆ ನೀವು ತತ್‌ಕ್ಷಣದಲ್ಲಿ ಬೆಳಕನ್ನು ಅನುಭವಿಸುವಿರಿ. ನೀವು ಪ್ರೀತಿಯನ್ನು ಹೊಂದಿರಬಹುದು ಆದರೆ ಬೇಕಾಗಿರುವಷ್ಟು ಅಲ್ಲ. ನೀವು ಪ್ರತಿದಿನ ನಿಮ್ಮ ದೈನಂದಿನ ಜೀವನದಲ್ಲಿ ಎಷ್ಟು ಪ್ರೀತಿಯನ್ನು ವ್ಯಕ್ತಪಡಿಸುತ್ತೀರಿ ಎಂಬುದನ್ನು ಪರೀಕ್ಷಿಸಿಕೊಳ್ಳಿ. ನಿಮ್ಮ ಅಂತರಂಗಕ್ಕೆ ಇಳಿಯಿರಿ ಮತ್ತು ನೀವು ನಿಜವಾಗಿಯೂ ಆಧ್ಯಾತ್ಮಿಕ ಜೀವನವನ್ನು ನಡೆಸುತ್ತಿದ್ದೀರಾ ಎಂಬುದನ್ನು ಕಂಡುಕೊಳ್ಳಿ. ನಿಮ್ಮ ನಕಾರಾತ್ಮಕತೆಗಳು ಇರುವಾಗ ಮತ್ತು ನೀವು ಅವನ್ನು ಬಿಟ್ಟುಕೊಡಲು ಇಷ್ಟಪಡದಿದ್ದಾಗ, ನೀವು ಪ್ರೀತಿಯನ್ನು ವ್ಯಕ್ತಪಡಿಸದಿದ್ದಾಗ, ಅನೇಕ ವರ್ಷಗಳು ಕಳೆದನಂತರವೂ ಅಧ್ಯಾತ್ಮವನ್ನು ವ್ಯಕ್ತಪಡಿಸದಿದ್ದಾಗ, ನೀವು ಬೆಳಕನ್ನು ಅನುಭವಿಸುವುದನ್ನು ಹೇಗೆ ನಿರೀಕ್ಷಿಸುತ್ತೀರಿ?

**ಪ್ರ: ದೇವರ ಮಾತನ್ನು ಕೇಳಿಸಿಕೊಳ್ಳಲು ನಾವು ಹೆಚ್ಚು ವಿಕಾಸಗೊಳ್ಳಬೇಕೇ?**

ಉ: ಅದು ಬೇರೆಯದೇ ಆದ ವಿಷಯ. ನೀವು ವಿಕಾಸಗೊಳ್ಳದಿದ್ದಾಗಲೂ ಕೂಡ ನಿಮ್ಮಲ್ಲಿ ಪ್ರೀತಿ ಇದ್ದರೆ ದೇವರು ನಿಮ್ಮೊಂದಿಗೆ ಮಾತನಾಡುವನು. ■

## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Higher Communication & Other Realities | 100/- |
| Light Body & Other Realities | 75/- |
| Master-Pupil Talks | 60/- |
| iGuruji Vol 1,3,4 & 7 | each 150/- |
| iGuruji - Vol 2 | 120/- |
| iGuruji - Vol 5 | 100/- |
| iGuruji - Vol 6 | 75/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis | 250/- |
| Channelled Knowledge from the Rishis-Vol 2 | 150/- |
| Channelled Knowledge from the Rishis-Vol 3 | 200/- |
| Guruji Speaks Part - I & II | each 200/- |
| Guruji Speaks Vol - 3 | 150/- |
| Guruji Speaks Vol 4, 5 & 6 | each 200/- |
| The Book of Reflections - Vol 1 & 2 | each 200/- |
| Meditators on Meditations | 75/- |
| Meditators on Experiences | 75/- |
| Meditational Experiences | 150/- |
| Awareness | 60/- |
| Living in Light | 10/- |
| Light | 10/- |
| Quotes from the Rishis | 100/- |
| Pyramid Revelations | 75/- |

| | |
|---|---|
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಋಷಿಗಳಿಂದ ಬಂದ ಜ್ಞಾನ – ಭಾಗ 2 | 150/- |
| ಗುರು–ಶಿಷ್ಯರ ಸಂಭಾಷಣೆ | 60/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ಬೆಳಕಿನ ಶರೀರ ಮತ್ತು ಇತರ ವಾಸ್ತವಗಳು | 100/- |


| | |
|---|---|
| ऋषींकडून मिळालेले ज्ञान (Marathi) | 200/- |
| प्रकाशवाट (Marathi) | 150/- |
| आय्गुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| गुरु–शिष्य संवाद (Marathi) | 60/- |

| | |
|---|---|
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |

| | |
|---|---|
| தியானம் செய்வது எப்படி | 50/- |
| ஒளியின் வாயில்கள் | 200/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |

| | |
|---|---|
| ధ్యానం చేయ్యడం ఎలా | 50/- |
| కాంతికి ద్వారములు | 150/- |

RNI. No. KARKAN/2003/13739 Registered Postal Regn. No. CPMG/KA/CNA/48/2012-14
Date of posting Newsletter-25th of Every Month. Posted at Bangalore GPO No. of Pages-8



ಗುರೂಜಿ ಕೃಷ್ಣಾನಂದ (1939 - 2012)

## ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('Manasa Foundation' ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80-G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

## ಆಧ್ಯಾತ್ಮಿಕ ಅನುಭವಗಳು

ಸಂ: ಶೋಭಾ ಕೆ. ರಾವ್; ಅನು: ಸ್ವರ್ಣಲತಾ

ನಾನು ಧ್ಯಾನ ಮಾಡುತ್ತಿರುವಾಗ ಬೆಳಕು ಕೆಲವು ನಿಮಿಷಗಳ ಕಾಲ ನನ್ನ ಒಂದೊಂದು ಜೀವಕೋಶಗಳಲ್ಲಿಯೂ ಹರಿಯುತ್ತದೆ. ನೀಲಿಮಿಶ್ರಿತ ಬಿಳಿ ಬೆಳಕು ಆನಂದಮಯಕೋಶದಲ್ಲಿ ಪ್ರಾರಂಭಿಸಿ 24 ಅಡಿ ತ್ರಿಜ್ಯದ ದೊಡ್ಡ ಗೋಳವಾದಂತೆ ಭಾಸವಾಗುತ್ತದೆ. ಆ ಕೆಲವು ನಿಮಿಷಗಳು ಮಾತ್ರ ಬಹಳ ಅದ್ಭುತವೆನಿಸಿ, ನನ್ನ ದೇಹ ಸ್ವಲ್ಪವೂ ಅಲುಗಾಡದೆ ಬಂಡೆಯಂತೆ ಇರುತ್ತದೆ. ನನ್ನ ಅರಿವು ಇಡೀ ಗೋಳದ ತುಂಬಾ ತುಂಬಿರುತ್ತದೆ. 36 ನಿಮಿಷ ಕಳೆಯುವುದು ಗೊತ್ತೇ ಆಗುವುದಿಲ್ಲ. ಆ ಅನುಭವಕ್ಕಾಗಿ ಮತ್ತೆಮತ್ತೆ ಧ್ಯಾನ ಮಾಡಬೇಕೆನಿಸುತ್ತದೆ. ಒಂದೊಂದು ದಿನ ಮಾತ್ರ ಆ ದೊಡ್ಡ ಗೋಲದ ಮಧ್ಯೆ ಒಂದು ಸಣ್ಣ ಬೆಳಕಿನ ಕಿಡಿಯು ಕಾಣುತ್ತದೆ. ನಾನೀಗ ಹೆಚ್ಚುಹೆಚ್ಚು ಸಮಯ ಮೌನವಾಗಿರಲು ಬಯಸುತ್ತೇನೆ.

– ಶಶಿಕಲಾ ಜಿ

ನನ್ನಲ್ಲಿ ಒಂದು ಮಹತ್ತರ ಬದಲಾವಣೆ ಆಗಿದೆ; ನಾನು ಉದ್ವೇಗ ಉಂಟುಮಾಡುವ ಅಥವಾ ಕೋಪಬರುವಂತಹ ಘಟನೆ ನಡೆದಾಗ, ಆ ಸ್ಥಳದಿಂದ ಹೇಗೋ ದೂರಹೋಗುತ್ತೇನೆ ಅಥವಾ ಆ ಸಂದರ್ಭದಲ್ಲಿ ನಾನು ಶಾಂತವಾಗಿರುತ್ತೇನೆ. ಆಗ ನಾನು ಕಣ್ಣುಮುಚ್ಚಿ 'ಎಲ್ಲವೂ ಸರಿಹೋಗುತ್ತದೆ' ಎಂದು ಮನಸ್ಸಿನಲ್ಲೇ ಹೇಳಿಕೊಂಡಾಗ ಮನಸ್ಸು ತಿಳಿಗೊಳ್ಳುತ್ತದೆ. ನಾನು ಯಾವಾಗಲೂ ಬೆಳಕಿನೊಂದಿಗೆ ಸಂಪರ್ಕದಲ್ಲಿದ್ದು, ಅದು ನನ್ನನ್ನು ಯಾವಾಗಲೂ ಗಮನಿಸುತ್ತಿದ್ದು ನನ್ನ ಯೋಗಕ್ಷೇಮ ನೋಡಿಕೊಳ್ಳುತ್ತಿದ್ದಂತೆ ಅನಿಸುತ್ತದೆ. ನಾನು ಏನೇ ಮಾಡಿದರೂ ಅದನ್ನು ಪ್ರಜ್ಞಾಪೂರ್ವಕವಾಗಿ ಹಾಗೂ ಜಾಗರೂಕತೆಯಿಂದ ಮಾಡುತ್ತೇನೆ. ಗುರೂಜಿಯವರಿಗೆ ನನ್ನ ಅನಂತ ವಂದನೆಗಳು.

– ಅರುಣ್ ತ್ಯಾಗರಾಜನ್

ನನ್ನೆರಡೂ ಕಾಲುಗಳಲ್ಲುಂಟಾದ ತಡೆಯಲಾರದ ನೋವಿನಿಂದಾಗಿ ನಾನು ಹಾಸಿಗೆಯಲ್ಲಿ ಮಲಗಿಕೊಂಡೇ ಗುರೂಜಿಯವರನ್ನು ನೋವು ನಿವಾರಣೆಗಾಗಿ ಪ್ರಾರ್ಥಿಸಿದೆ. ಆಗ ನನ್ನ ಕೊಠಡಿಯೊಳಗೆ ಯಾರೋ ನಡೆದು ಬಂದಂತೆ ಅನಿಸಿತು; ನನಗೆ ಅಲ್ಲಿ ಯಾರೋ ಇರುವಂತೆ ಅನಿಸಿತು. ತಕ್ಷಣ ನನ್ನ ಕಾಲುನೋವು ಸ್ವಲ್ಪಮಟ್ಟಿಗೆ ಕಡಿಮೆಯಾಯಿತು. ನಂತರ, ನಾವು ಪ್ರಾಮಾಣಿಕವಾಗಿ ಬೇಡಿಕೊಂಡಾಗ ನಮಗೆ ಸಹಾಯ ಮಾಡುವ ಮತ್ತು ರಕ್ಷಿಸುವ ಗುರೂಜಿಯವರೇ ಆ ವ್ಯಕ್ತಿ ಎಂಬ ಅರಿವು ನನಗಾಯಿತು.

– ಆಶಾ ಜಗನ್ನಾಥ್

ಕೆಲವೊಮ್ಮೆ, ನನ್ನ ದೇಹದಲ್ಲಿ ಚೈತನ್ಯದ ಹರಿವು ಬಹಳ ಹೆಚ್ಚಾಗುತ್ತದೆ. ಅಂತಹ ಒಂದು ಅನುಭವ ಡಿಸೆಂಬರ್ 30ರ ಅಖಂಡಧ್ಯಾನದ ದಿನ ಆಯಿತು. ಅದೇ ರೀತಿ ಅಂದು ರಾತ್ರಿ 10 ಗಂಟೆಯ ಸಮಯದಲ್ಲಿ ನನ್ನ ದೇಹದಲ್ಲಿ ತೀವ್ರವಾದ ಕಂಪನಗಳನ್ನು ಅನುಭವಿಸಿದೆ. ತಕ್ಷಣ ಸಮಯ ನೋಡಿದಾಗ, ಅದು ನಾನು ಹೀಲಿಂಗ್ ಸೆಷನ್‌ಗೆ ಕುಳಿತುಕೊಳ್ಳುವ ಸಮಯ ಎಂದು ಅರಿವಾಯಿತು!

– ಜಸ್‌ಪ್ರೀತ್ ಕೌರ್

ನಾನು ನೀಲಿಬಣ್ಣದ ಬೆಳಕನ್ನು ಮನಸ್ಸಿನಲ್ಲಿ ಕಾಣಲು ಪ್ರಯತ್ನಿಸಿದಾಗಲೆಲ್ಲಾ, ನನ್ನನ್ನು ನಾನು ಆ ನೀಲಿ ಬೆಳಕಿನ ಚೆಂಡಿನ ಒಳಗೆ ಮತ್ತು ಹೊರಗೆ ಸುತ್ತುತ್ತಿರುವ ಮತ್ತು ಹೊಳೆಯುತ್ತಿರುವ ಒಂದು ವಿದ್ಯುತ್ ಕಣವನ್ನಾಗಿ ಕಂಡೆ. ನಂತರ ನಿಧಾನವಾಗಿ ಆ ಬೆಳಕಿನಲ್ಲೇ ಸಂಪೂರ್ಣವಾಗಿ ಲೀನವಾದೆ.

ಸಮೃದ್ಧತೆಯ ಅನುಭವ ನನ್ನೊಳಗೆ ಆಳವಾಗಿದ್ದು, ಎಂತಹ ಕಷ್ಟದ ಸಮಯದಲ್ಲೂ ಯಾವುದೇ ಭಯವಿಲ್ಲ. ಇದು ನಾನು ಬುದ್ಧಿವಂತಿಕೆ ಹಾಗೂ ಸಮರ್ಪಕತೆಯಿಂದ ನಿಭಾಯಿಸಬೇಕಾಗಿರುವ ಮತ್ತೊಂದು ಪರೀಕ್ಷೆ ಎಂಬ ಅರಿವು ನನಗಾಗಿದೆ.

– ಜಯಂತಿ ನಟರಾಜನ್

ನನ್ನ ಮಗ ಮತ್ತು ನಾನು ಪ್ರತಿ ರಾತ್ರಿ 10 ಗಂಟೆಗೆ ಗುರೂಜಿಯವರಿಗೆ ಬೆಳಕನ್ನು ಕಳುಹಿಸುತ್ತಿದ್ದೆವು. ನಾನು ಗುರೂಜಿಯವರಿಗೆ ಬೆಳಕನ್ನು ಕಳುಹಿಸಿದಾಗ, ನನ್ನ ಮತ್ತು ಅವರ ನಡುವಿನ ದೂರ ಕಣ್ಮರೆಯಾಯಿತು; ಮತ್ತು ನಾನು ಅವರನ್ನು ನೇರವಾಗಿ ಭೇಟಿಯಾದದ್ದಕ್ಕಿಂತಲೂ ಬಹಳ ಹತ್ತಿರದಲ್ಲಿದ್ದೆ ಎಂದು ಅನಿಸುತ್ತಿತ್ತು. ಆಗ ನಾನು ಅವರ ಸುತ್ತ ಇದ್ದ ದೈವೀ ಪ್ರಭೆಯನ್ನು ಮುಟ್ಟಿ ಅನುಭವಿಸಲು ಸಾಧ್ಯವಾಗಿತ್ತು ಮತ್ತು ನನಗೆ ಸಮಯದ ಅರಿವು ಇಲ್ಲವಾಯಿತು. ಗುರೂಜಿಯವರು ಅನಾರೋಗ್ಯ ಸ್ಥಿತಿಯಲ್ಲಿ ಇದ್ದಾಗಲೂ ಅವರು ನನಗೆ ಕಲಿಸುತ್ತಿದ್ದರು; ಅವರ ಮತ್ತು ನಮ್ಮ ನಡುವೆ ಅಂತರವನ್ನು ಸೃಷ್ಟಿಸುವವರು ನಾವೇ ಎಂಬುದನ್ನು ನಾನು ಅರಿತುಕೊಳ್ಳುವಂತೆ ಮಾಡಿದರು.

– ನಂದಿತಾ ವಿಜಯನ್

ಇತ್ತೀಚೆಗೆ, ಲೈಟ್ ಚಾನಲಿಂಗ್ ನಂತರ ನಾನು ಮಲಗಿದಾಗ, ಗಾಢ ನಿದ್ರೆಗೆ ಜಾರಿದೆ. ಆ ಸಮಯದಲ್ಲಿ ನಾನು ಒಂದು ಸ್ಥಳಕ್ಕೆ ಸೂಕ್ಷ್ಮ ಪ್ರಯಾಣ ಮಾಡಿರುವುದಾಗಿ ಅನಿಸಿತು. ಅಲ್ಲಿ ನಾನು ಮರದಿಂದ ಮರಕ್ಕೆ ಹಾರುತ್ತಿದ್ದಂತೆ ಮತ್ತು ಅತ್ಯಂತ ಸಂತೋಷದಿಂದ ಇದ್ದಂತೆ ಅನಿಸುತ್ತಿತ್ತು. ಅಲ್ಲಿ ರೆಕ್ಕೆಗಳಿದ್ದ ಹಾಗೂ ರೆಕ್ಕೆಗಳಿಲ್ಲದ ಇನ್ನೂ ಅನೇಕ ಜೀವಿಗಳಿದ್ದವು; ಅವು ಎಲ್ಲೆಡೆ ಹಾರುತ್ತಿದ್ದಾಗ ಮತ್ತು ಗಾಳಿಯಲ್ಲಿ ತೇಲುತ್ತಿದ್ದಾಗ, ನಾನು ಅವುಗಳಿಂದ ಬಣ್ಣ, ಬೆಳಕು ಮತ್ತು ಚೈತನ್ಯ ಹರಿಯುತ್ತಿದ್ದುದನ್ನು ನೋಡಿದೆ. ಪ್ರಾಯಶಃ ಆ ಸ್ಥಳದ ಪ್ರಜ್ಞಾವಂತ ಮಾಸ್ಟರ್ ಆಗಿರಬಹುದಾದ ಒಬ್ಬ ಕುಳ್ಳಗಿನ ವ್ಯಕ್ತಿಯ ಬಳಿಗೆ ನನ್ನನ್ನು ಕರೆದೊಯ್ದರು. ಅವರು ನಾನೆಲ್ಲಿರುವೆನೆಂದು ತಿಳಿಸಿ, ನನಗೆ ಕೆಲವು ಸಂದೇಶಗಳನ್ನು ನೀಡಿದರು. ದುರದೃಷ್ಟವಶಾತ್ ನನಗೆ ಅದಾವುದನ್ನೂ ನೆನಪಿಸಿಕೊಳ್ಳಲಾಗುತ್ತಿಲ್ಲ.

– ನಿತಿನ್ ಮನೋಹರ್

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.300/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, ಡಾ॥ ಮೋದಿ ಮುಖ್ಯ ರಸ್ತೆ, ಬೆಂಗಳೂರು – 560 086. ಫೋನ್ : 2335 9992
ಸಂಪಾದಕರು : ಶ್ಯಾಮಲಾ ದೇವಿ